7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ : ಕುಡಿಯುವ ನೀರಿನ ಸಮಸ್ಯೆ ಮತ್ತು ಕುಸಿಯುತ್ತಿರುವ ಅಂತರ್ಜಲ ಹಾಗೂ ಇದರ ನಿವಾರಣೆಗಾಗಿ ಹಮ್ಮಿಕೊಳ್ಳಬೇಕಾದ ಶಾಶ್ವತ ನೀರಾವರಿ ಯೋಜನೆಗಳ ಬಗ್ಗೆ.

ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ : ಮಾನ್ಯ ಛೇರ್‌ಮನ್‌ರವರೆ, ಬಯಲುಸೀಮೆ ಪ್ರದೇಶದ ಸುಮಾರು 6 ಜಿಲ್ಲೆಗಳ ಸುಮಾರು 43 ತಾಲ್ಲೂಕುಗಳ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಒಂದು ದೂರಗಾಮಿ ಮತ್ತು ಶಾಶ್ವತವಾದ ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸಬೇಕೆಂದು ಅನೇಕ ವರ್ಷಗಳ ಒಂದು ಬೇಡಿಕೆಯ ಪರಿಣಾಮ ಹಿಂದಿನ ಸರ್ಕಾರಗಳಲ್ಲೂ ಮತ್ತು ಈಗಿನ ಸರ್ಕಾರದಲ್ಲೂ ಕೂಡ ಈ ಒಂದು ಭಾಗದ ಜನರಿಗೆ ಕೆಲವಾರು ಯೋಜನೆಗಳ ಮುಖಾಂತರ ನೀರು ಒದಗಿಸತಕ್ಕ ಯೋಜನೆಗಳನ್ನು ರೂಪಿಸಿರುವುದನ್ನು ಈ ಸಂದರ್ಭದಲ್ಲಿ ನಾನು ಜ್ಞಾಪಿಸುತ್ತಾ, ಈ ಭಾಗದ ಅನೇಕ ನಮ್ಮ ತಾಲ್ಲೂಕುಗಳಲ್ಲಿ ವಿಶೇಷವಾಗಿ ಇವತ್ತು ಈ ಪ್ರದೇಶಗಳು ಹೆಚ್ಚು ನೀರಾವರಿ ಸೌಲಭ್ಯವಿದೆ ಮತ್ತು ಕುಡಿಯುವ ನೀರಿಗೆ ಹೆಚ್ಚು ಕೆರೆಗಳನ್ನು ಆಧಾರವಾಗಿಟ್ಟುಕೊಂಡು ಸುಮಾರು 8,000 ಕೆರೆಗಳಿಗೂ ಮೇಲ್ಪಟ್ಟಿರುವಂಥ ಪ್ರದೇಶಗಳು ಇವಾಗಿವೆ. ಮತ್ತೆ ಹಿಂದೆ ತೆರೆದ ಬಾವಿಗಳಲ್ಲೂ ಸಹ ನೀರನ್ನು ಆಶ್ರಯವಾಗಿಸಿಕೊಂಡು ರೈತರು ಬದುಕುತ್ತಿದ್ದುದ್ದು ಒಂದು ಇತಿಹಾಸವಾಗಿದೆ. ಆದರೆ ಇವತ್ತು ಏನಾಗಿದೆ ಪರಿಸ್ಥಿತಿ, ಎಲ್ಲಾ ಕೆರೆ-ಕುಂಟೆಗಳು ಬತ್ತಿ ಹೋಗಿವೆ. ಜೊತೆಗೆ ತೆರೆದಬಾವಿಗಳಲ್ಲೂ ಸಹ ಸಂಪೂರ್ಣವಾಗಿ ನೀರು ಬತ್ತಿ ಹೋಗಿದೆ. ಅದಾದ ನಂತರ ಬಹುಶಃ ಕಳೆದ 30 ವರ್ಷಗಳಿಂದೀಚೆಗೆ ಆಳವಾದ ಕೊಳವೆ ಬಾವಿಗಳ ಮುಖಾಂತರ ನೀರನ್ನು ತೆಗೆದು ಬೇಸಾಯ ಮಾಡತಕ್ಕಂಥ ಪದ್ಧತಿ ಈ ಭಾಗದಲ್ಲಿ ಮಾಡುತ್ತಿರುವ ಪರಿಸ್ಥಿತಿಯಲ್ಲಿ ಈ ಒಂದು ಭಾಗದಲ್ಲೂ ಸಹ ಮೊದಲಿಗೆ 100-200 ಅಡಿಗಳಲ್ಲಿ ನೀರು ಸಿಗುವಂಥ ಪರಿಸ್ಥಿತಿ ಇತ್ತು. ಆದರೆ ಇವತ್ತು 1000, 1200 ಅಡಿ ಅಳಕ್ಕೆ ಕೊಳವೆಬಾವಿಗಳನ್ನು ಕೊರೆದರೂ ನೀರು ಸಿಗದಿರುವಂಥ ಪರಿಸ್ಥಿತಿಯಿಂದಾಗಿ ಈ ಭಾಗದ ರೈತರಿಗೆ ಒಂದು ಸಮಸ್ಯೆಯಾಗಿ ಕುಳಿತಿದೆ. ಎಷ್ಟು ಬಾವಿಗಳನ್ನು, ಬೋರ್‌ವೆಲ್‌ಗಳನ್ನು ಹಾಕಿದರೂ ನೀರು ಸಿಗುವುದು ಕಡಿಮೆ, ಜೊತೆಗೆ ಅದೆಲ್ಲಾ ಸಹ ಫ್ಲೋರೈಡ್ ಮತ್ತು ವಿಷಪೂರಿತವಾದ ನೀರನ್ನು ಕುಡಿಯುವ ಸಂದರ್ಭ

ಇವತ್ತು ಒದಗಿ ಬಂದಿದೆ. ಈ ಭಾಗದಲ್ಲಿ ಯಾವುದೇ ನದಿ ಮೂಲಗಳಿಂದ ನೀರಾವರಿ ಒದಗಿಸತಕ್ಕಂಥ ಯೋಜನೆಗಳು ಆಗದೇ ಇರುವುದು, ಸ್ವಾತಂತ್ರ್ಯ ಬಂದಾಗಿನಿಂದಲೂ ಕೂಡ ಯಾವುದೇ ಒಂದು ಯೋಜನೆಯನ್ನು ನದಿ ಮೂಲಗಳಿಂದ ಬರತಕ್ಕ ಯೋಜನೆಗಳು ಆಗದೇ ಇರುವುದು ಬಹಳ ದುರದೃಷ್ಟಕರ. ಈ ಹಿನ್ನೆಲೆಯಲ್ಲಿ ಬಂದಂಥ ಅನೇಕ ಸರ್ಕಾರಗಳು ಈ ಭಾಗದ ರೈತರ ಬವಣೆಯನ್ನು ಪ್ರಾಮಾಣಿಕವಾಗಿ ನೀಗಿಸುವಂಥ ಪ್ರಯತ್ನ ಮಾಡಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮಾನ್ಯ ಛೇರ್ಮನ್‌ರವರೆ, ನಮ್ಮ ಭಾರತ ದೇಶದಲ್ಲಿ ಇವತ್ತು ಸರಾಸರಿ ಮಳೆ ಪ್ರಮಾಣ 110 ಸೆಂಟಿಮೀಟರ್ ಇದೆ. ಇಡೀ ಭಾರತದ ವಿಸ್ತೀರ್ಣದಲ್ಲಿ average, ಈ ಮಳೆಯಿಂದ ಆಗತಕ್ಕ ಜಲ ಸಂಪತ್ತನ್ನು ಅಂದಾಜು ಮಾಡಿದ್ದಾರೆ. 1 ಲಕ್ಷ 27 ಸಾವಿರದ 244 ಟಿ.ಎಂ.ಸಿ. ನೀರು ಜಲ ಸಂಪತ್ತು ಇದೆಯೆಂದು ಅಂದಾಜು ಮಾಡಿದ್ದಾರೆ. ಇದಕ್ಕೆ ಕೋಶ್ಯ ಸೂತ್ರ ಎಂದು ಹೇಳಿ ಒಂದು assessment ಮಾಡಿದ್ದಾರೆ. ಅದರಲ್ಲಿ 50% ಬಿದ್ದಂಥ ಮಳೆ ನೀರು ಹಿಂಗುವಿಕೆ, ಆವಿಯಾಗುವಿಕೆ, loss ಆಗುವುದು ಇವುಗಳನ್ನು ಹೊರತುಪಡಿಸಿದರೆ ಮೇಲ್ಮೈ ಲಭ್ಯವಿರುವಂಥ ಜಲ ಸಂಪತ್ತು ಸುಮಾರು 74,509,27 ಟಿಎಂಸಿ ನೀರು ಇಡೀ ದೇಶದಲ್ಲಿ ಲಭ್ಯವಿದೆಯೆಂದು ಅಂದಾಜು ಮಾಡಿದ್ದಾರೆ. ಸುಮಾರು 600 ನದಿಗಳು ದೇಶ ವ್ಯಾಪ್ತಿ ಹರಿಯುವಂಥ ಒಂದು ವ್ಯವಸ್ಥೆ ನಮ್ಮ ದೇಶದಲ್ಲಿದೆ. ಅದರಲ್ಲೂ ಪ್ರಾಮುಖ್ಯವಾಗಿ ಭಾರತ ದೇಶದಲ್ಲಿ 2 ನದಿ ಜಾಲಗಳಿವೆ. ಒಂದು ಪೂರ್ವಾಭಿಮುಖವಾಗಿ ಹರಿಯುವ ನದಿಗಳು – ಬಂಗಾಳ ಕೊಲ್ಲಿ ಸೇರುವ ನದಿಗಳು ಇವುಗಳ ಸಂಖ್ಯೆ 426.

ಆ ನದಿಗಳಿಂದ ಲಭ್ಯವಾಗುವ ನೀರಿನ ಪ್ರಮಾಣ ಸುಮಾರು 57,902.49 ಟಿ.ಎಂ.ಸಿ. ಮತ್ತು ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು, ಅರಬ್ಬಿ ಸಮುದ್ರವನ್ನು ಸೇರುವ ನದಿಗಳು ಒಟ್ಟಾರೆ 186 ನದಿಗಳಿಂದ 17,644.79 ಟಿ.ಎಂ.ಸಿ. ನೀರು ಲಭ್ಯವಾಗುತ್ತದೆಂದು ಮೇಲ್ಮೈ ಅಂದಾಜನ್ನು ಮಾಡಲಾಗಿದೆ. ಒಟ್ಟಿಗೆ ಸುಮಾರು 612 ನದಿಗಳಿಂದ 75,547.28 ಟಿ.ಎಂ.ಸಿ. ಮೇಲ್ಮೈ ಜಲ–ಸಂಪತ್ತು ಲಭ್ಯವಿದೆ ಎಂಬ ಅಂದಾಜನ್ನು ಮಾಡಿದ್ದಾರೆ. ಆದರೆ, ಅನೇಕ ಅಂತರರಾಷ್ಟ್ರೀಯ, ಅಂತರ ರಾಜ್ಯ ವಿವಾದಗಳಿಂದ, ರಾಜ್ಯ–ರಾಜ್ಯಗಳ ನಡುವಣ ವಿವಾದಗಳಿಂದ, ಸಂಕುಚಿತ ಮನೋಭಾವನೆಯಿಂದ ಮತ್ತು ಇಚ್ಛಾಶಕ್ತಯ

ಕೊರತೆಯಿಂದ ನೀರಾವರಿ ಸೌಲಭ್ಯಕ್ಕೆ ಲಭ್ಯವಿದ್ದಂತಹ 75 ಸಾವಿರ ಟಿ.ಎಂ.ಸಿ. ನದಿ ನೀರಿನಲ್ಲಿ ಇದುವರೆಗೆ 2013 ರವರೆಗೆ ಕೇವಲ 24 ಸಾವಿರ ಟಿ.ಎಂ.ಸಿ. ನೀರನ್ನು ಬಳಕೆ ಮಾಡುವ ಯೋಜನೆಗಳನ್ನು ಸರ್ಕಾರಗಳು ರೂಪಿಸಿವೆ. ಆದರೆ, ಲಭ್ಯವಿರುವ ನೀರಿನ ಪ್ರಮಾಣದಲ್ಲಿ ಕೇವಲ 32.21 % ಮಾತ್ರ ನೀರು ಬಳಕೆಯಾಗುತ್ತಿದ್ದು, ಈಗಲೂ ಇನ್ನೂ 67.79 ಟಿ.ಎಂ.ಸಿ. ನೀರಿನ ಬಳಕೆ ಮಾಡಲು ಅವಕಾಶವಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಏಳು ಪ್ರಮುಖವಾದ ನದಿ ಕಣಿವೆಗಳು, sub-basins ಇವೆ. ಅದರಲ್ಲಿ ಬಹಳ ಮುಖ್ಯವಾಗಿ ಪಶ್ಚಿಮ ವಾಹಿನಿ ನದಿಗಳು. ಪಶ್ಚಿಮಕ್ಕೆ ಹಾದು ಹೋಗುವ ನದಿಗಳ ಜಲ ಸಂಪತ್ತು ಸುಮಾರು 16 ನದಿಗಳ ನೀರು ಸಮುದ್ರ ಪಾಲಾಗುತ್ತಿದ್ದು, ಲಭ್ಯವಿರುವ ಜಲ ಸಂಪತ್ತು 2,459 ಟಿ.ಎಂ.ಸಿ. ಇದರಲ್ಲಿ ನಾವು ಬಳಕೆ ಮಾಡುವಂತಹ ಅಂದರೆ ಬೇರೆ ರೀತಿಯಲ್ಲಿ harvest ಮಾಡಿ, ಒಣ ಭೂಮಿ, ನಮ್ಮ ಬಯಲು ಸೀಮೆ ಪ್ರದೇಶಗಳಿಗೆ ನೀರು ತೆಗೆದುಕೊಂಡು ಹೋಗುವ ಪ್ರಮಾಣ ಸುಮಾರು 209 ಟಿ.ಎಂ.ಸಿ. ನೀರನ್ನು ಬಳಕೆ ಮಾಡಬಹುದು ಎಂದು ತಜ್ಞರು ವರದಿ ಮಾಡಿದ್ದಾರೆ. ಕಾವೇರಿ ಬೇಸಿನ್‌ನ 16 ನದಿಗಳಿಂದ ಕೂಡ ಸುಮಾರು 841.8 ಟಿ.ಎಂ.ಸಿ. ನೀರು ಲಭ್ಯವಿದೆ ಎಂದು ಅಂದಾಜು ಮಾಡಿದ್ದಾರೆ. ಅದರಲ್ಲಿ 103 ಟಿ.ಎಂ.ಸಿ. ನೀರನ್ನು ಬಯಲು ಸೀಮೆ ಪ್ರದೇಶಗಳಿಗೆ ತೆಗೆದುಕೊಂಡು ಹೋಗುವ ಅವಕಾಶವಿದೆ ಎಂದು ಅಂದಾಜು ಮಾಡಿದ್ದಾರೆ. ಕೃಷ್ಣಾ ಕಣಿವೆಯಲ್ಲಿ 21 ನದಿಗಳ ಮುಖಾಂತರ ಸುಮಾರು 1502 ಟಿ.ಎಂ.ಸಿ. ನೀರು ಲಭ್ಯವಿದೆ ಎಂದು ಅಂದಾಜು ಮಾಡಿದ್ದಾರೆ. ಅದರಲ್ಲಿ 56 ಟಿ.ಎಂ.ಸಿ. ನೀರು ಈ ಬಯಲು ಸೀಮೆ ಪ್ರದೇಶಗಳಿಗೆ ತೆಗೆದುಕೊಂಡು ಹೋಗಲು ಅವಕಾಶ ಇದೆ ಎಂದು ಅಂದಾಜು ಮಾಡಿದ್ದಾರೆ. ಒಟ್ಟಾರೆ ಸುಮಾರು 369 ಟಿ.ಎಂ.ಸಿ. ನೀರನ್ನು ಬೇರೆ ಬೇರೆ ನದಿ ಕಣಿವೆಗಳಿಂದ ಕೊಂಡೊಯ್ಯಬಹುದು ಎಂಬ ಅಂದಾಜನ್ನು ಮಾಡಿದ್ದಾರೆ. ವಿಶೇಷವಾಗಿ ಮತ್ತೆ ಇನ್ನೂ ಕೂಡ ಉತ್ತರ ಪೆನ್ನಾರ್ ಎನ್ನುವಂತಹ ನದಿ ನಮ್ಮ ಭಾಗದಲ್ಲಿ ಬರುತ್ತದೆ. ಅದರಲ್ಲಿ ನೀರು ಇರುವುದೇ ಇಲ್ಲ. ಆ ನದಿ ಹರಿಯುವುದೇ ಕಷ್ಟ. ಸುಮಾರು 10 ವರ್ಷಕ್ಕೋ, 12 ವರ್ಷಕ್ಕೋ ವಿಶೇಷವಾಗಿ ಮಳೆ ಬಂದರೆ

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನನ್ನು ಅಲಂಕರಿಸಿದರು)

ಹರಿಯುವ ಪರಿಸ್ಥಿತಿ ಇದೆ. ಹಾಗೆಯೇ ದಕ್ಷಿಣ ಪೆನ್ನಾರ್‌ನಲ್ಲಿ 32 ಟಿ.ಎಂ.ಸಿ. ನೀರು ಇದೆ ಎಂದು ಅಂದಾಜು ಮಾಡಿದ್ದಾರೆ. ಪಾಲಾರ್ ಬೇಸಿನ್ ಎಂದು ಇದೆ. ನಮ್ಮ ಪ್ರದೇಶ ಕೂಡ ಪಾಲಾರ್ ಪೆನ್ನಾರ್ ಬೇಸಿನ್‌ಗೆ ಸೇರುವ ಪ್ರದೇಶಗಳು. ಎಲ್ಲವೂ ಸೇರಿದರೆ ಒಟ್ಟಾರೆ 369 ಟಿ.ಎಂ.ಸಿ. ನೀರು ಲಭ್ಯವಿದೆ ಎಂಬ ಅಂದಾಜು ಮಾಡಿದ್ದಾರೆ. ಅದರಲ್ಲಿ ಪಶ್ಚಿಮ ವಾಹಿನಿ ನದಿಗಳು, ಅಂದರೆ ಈ ಕಡೆ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಂದ ಸುಮಾರು 280 ಟಿ.ಎಂ.ಸಿ. ನೀರು ಮತ್ತು ಕೃಷ್ಣಾಕಣಿವೆಯಿಂದ 100 ಟಿ.ಎಂ.ಸಿ. ನೀರು ಮತ್ತು ಕಾವೇರಿ ಕಣಿವೆಯಿಂದ ಒಟ್ಟಾರೆ 480 ಟಿ.ಎಂ.ಸಿ. ನೀರು ಲಭ್ಯವಿದೆ ಎಂದು ಅಂದಾಜು ಮಾಡಿದ್ದಾರೆ. ಇದನ್ನು ಬಹುಶಃ ಪಶ್ಚಿಮಾಭಿಮುಖವಾಗಿ ಹರಿಯುವ ನದಿ ನೀರು ಸಂಪೂರ್ಣವಾಗಿ ಸಮುದ್ರ ಸೇರಿ ಪ್ರತಿ ವರ್ಷ ಸುಮಾರು 2 ಸಾವಿರ ಟಿ.ಎಂ.ಸಿ. ಮೇಲ್ಪಟ್ಟು ನೀರು ಸಮುದ್ರ ಸೇರುತ್ತಿದೆ. ಇದು ಯಾವುದಕ್ಕೂ ಕೂಡ ಬಳಕೆಯಾಗುತ್ತಿಲ್ಲ. ಇದನ್ನು ಮನಗಂಡು ಡಾ: ಪರಮಶಿವಯ್ಯ ರವರು ಒಂದು ಯೋಜನೆಯನ್ನು ತಯಾರಿಸಿ ಆ ನದಿಗಳ ನೀರನ್ನು ಏಕೆ ಬಳಸಿಕೊಳ್ಳಬಾರದೆಂಬ ಯೋಜನೆಯನ್ನು ರೂಪಿಸಿ ಸರ್ಕಾರಕ್ಕೆ ಸನ್ಮಾನ್ಯ ಎಸ್.ಎಂ.ಕೃಷ್ಣ ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಒಂದು ವರದಿಯನ್ನು ಸಲ್ಲಿಸಿ, ಈ ನೀರನ್ನು harvest ಮಾಡಿ ಬಯಲು ಸೀಮೆ ಪ್ರದೇಶಗಳಿಗೆ ಹರಿಸುವ ಯೋಜನೆಯನ್ನು ರೂಪಿಸಿದರು. ಬಹುಶಃ ಎಸ್.ಎಂ. ಕೃಷ್ಣ ರವರು ಪ್ರಥಮ ಬಾರಿಗೆ ಅದನ್ನು ಸರ್ವೆ ಕಾರ್ಯ ಮಾಡಲು ಹಣವನ್ನು ಮಂಜೂರು ಮಾಡಿ ಬಿಡುಗಡೆ ಮಾಡಿ ಬಿಡುಗಡೆ ಮಾಡಿ ಹೈದರಾಬಾದ್ ಸಂಸ್ಥೆಗೆ ಸರ್ವೆ ಕಾರ್ಯ ಮಾಡಲು ಆದೇಶ ಮಾಡಿದರು. ಅದಾದ ಮೇಲೆ ಬಂದಂತಹ ಸರ್ಕಾರಗಳು ಸನ್ಮಾನ್ಯ ಕುಮಾರಸ್ವಾಮಿ ರವರು ಬಂದ ಸಂದರ್ಭದಲ್ಲಿ ಅವರೂ ಕೂಡ ಆ ಭಾಗದ ಪ್ರದೇಶಗಳಿಗೆ ನೀರು ಕೊಡಬೇಕೆಂಬ ಆಲೋಚನೆ ಇಟ್ಟುಕೊಂಡು ಡಾ: ಪರಮಶಿವಯ್ಯ ರವರ ವರದಿಯನ್ನು ಸ್ವಲ್ಪ ಮಾರ್ಪಡಿಸಿ, ಕೆ.ಸಿ.ರೆಡ್ಡಿ ಅವರ ಮಧ್ಯಂತರ ವರದಿಯನ್ನು ತಯಾರು ಮಾಡಿ ನಮ್ಮ ಕೋಲಾರದ ಕೆಲವು ಕೆರೆಗಳಿಗೆ ಮಾತ್ರ ನೀರನ್ನು, ಎಲ್ಲಿಂದ ಎಂದರೆ ನಮ್ಮ ನದಿ, ತುಮಕೂರು ಭಾಗದಿಂದ ಆಕಡೆ, ನದಿಯ ಹೆಸರು ಮರೆತು ಹೋಗಿದೆ ಆ ಕಡೆಯಿಂದ ಸುಮಾರು 19 ಕೆರೆಗಳಿಗೆ ನೀರು ಒದಗಿಸುವ ಯೋಜನೆಯನ್ನು ಕೇವಲ ಕೋಲಾರಕ್ಕೆ ಮಾತ್ರ ರೂಪಿಸಿ, ಕೆ.ಸಿ. ರೆಡ್ಡಿ

ರವರ ವರದಿ ಜಾರಿ ಮಾಡಬೇಕೆಂದು ಪ್ರಯತ್ನ ಮಾಡಿದರು. ಅದು ಎಲ್ಲೋ ಒಂದು ಹಂತಕ್ಕೆ ಬಂದು ನಿಂತು ಹೋಯಿತು. ಅದಾದ ಮೇಲೆ ಬಂದಂತಹ ಸರ್ಕಾರಗಳು ನಮ್ಮ ಬಿ.ಜೆ.ಪಿ. ಸರ್ಕಾರದಲ್ಲಿ ಕೂಡ ಒಂದು ಪ್ರಯತ್ನ, ಬಹುಶಃ ಅನೇಕ ರೈತರ ಹೋರಾಟದ ಪರಿಣಾಮದಿಂದ ಆ ಸರ್ಕಾರದಲ್ಲಿ ಕೂಡ ಒಂದು ಹೊಸ ಯೋಜನೆಯನ್ನೂ ಇದು ಡಾ:ಪರಮಶಿವಯ್ಯ ರವರ ವರದಿಯ ಕೂಸು, ಎತ್ತಿನ, ಹೊಳೆ ಯೋಜನೆ ಎಂದು ಹೇಳಿ, ಅದನ್ನೂ ಕೂಡ ತಯಾರು ಮಾಡಿ ಸುಮಾರು 8,323 ಕೋಟಿಗಳ ಒಂದು ಯೋಜನೆಯನ್ನು ರೂಪಿಸಿದರು. ಈ ಯೋಜನೆ ಈಗಾಗಲೇ ಬಹುಶಃ ಸರ್ಕಾರದಲ್ಲಿ ಇವತ್ತು ಮೂರು ಹಂತಗಳನ್ನಾಗಿ ಮಾಡಿ, ಮೊದಲನೇ ಹಂತದ ಯೋಜನೆ ಸುಮಾರು 2,900 ಕೋಟಿ ರೂ.ಗಳ ಯೋಜನೆ ತಯಾರು ಮಾಡಿ ಅದು ಈಗಾಗಲೇ ಟೆಂಡರ್ ಹಂತಕ್ಕೆ ಬಂದಿದೆ. ಬಹುಶಃ ಈ ಸರ್ಕಾರ ಟೆಂಡರ್ ಅನುಮೋದಿಸಿ, ಆ ಯೋಜನೆಗೆ ಚಾಲನೆ ಕೊಡುವ ಕೆಲಸ ಜರೂರಾಗಿ ಆಗಬೇಕಾಗಿದೆ ಎಂಬ ಮನವಿಯನ್ನು ಈ ಸಂದರ್ಭದಲ್ಲಿ ಹೇಳಿ ಇನ್ನೂ ಒಂದು ಕಡೆ ಡಾ: ಪರಮ ಶಿವಯ್ಯ ರವರ ವರದಿ ಒಂದು ವಿಸ್ತೃತ ಯೋಜನೆ. ಅದರ ವ್ಯಾಪ್ತಿ ಬಹುಶಃ ಈ ಎತ್ತಿನ ಹೊಳೆ ಯೋಜನೆಯಿಂದ ಅಂದಾಜು ಮಾಡಿರುವುದು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರದ ಕೆಲವು ತಾಲ್ಲೂಕುಗಳು ಮತ್ತು ತುಮಕೂರಿನ ಕೆಲವು ಭಾಗಗಳಿಗೆ ಸುಮಾರು 24 ಟಿ.ಎಂ.ಸಿ. ಮಾತ್ರ ನೀರು ಕೊಡುವ ಯೋಜನೆ. ಆದರೆ ಡಾ:ಪರಮಶಿಯ್ಯರವರು ರೂಪಿಸಿರುವ ಯೋಜನೆ ಬಹಳ ವಿಸೃತವಾದ ಯೋಜನೆ. ಇದು 6 ಜಿಲ್ಲೆಗಳ 43 ತಾಲ್ಲೂಕುಗಳಿಗೆ ನೀರು ಕೊಡುವ ಯೋಜನೆ. ಇದಕ್ಕೆ ಬಹುಶಃ ಅವರ ಅಂದಾಜಿನ ಪ್ರಕಾರ ಇನ್ನೂ 25 ಸಾವಿರ ಕೋಟಿ ಹಣ ಬೇಕಾಗುತ್ತದೆಂಬ ಅಂದಾಜು ಮಾಡಿದ್ದಾರೆ. ಅವರ ವರದಿಯ ಆಧಾರದ ಮೇಲೆ ಅವರ ಅಧ್ಯಕ್ಷತೆಯಲ್ಲಿ ಹಿಂದಿನ ಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಿ, ಅದರ ಸಾಧ್ಯ-ಸಾಧ್ಯತೆಗಳ ಬಗ್ಗೆ ವರದಿ ಕೊಡಬೇಕೆಂದು ಆಜ್ಞೆ ಮಾಡಿದೆ. ಡಾ:ಪರಮಶಿವಯ್ಯ ರವರು ಕೂಡ ಅನೇಕ ಸಬೆಗಳನ್ನು ಮಾಡಿ ವರದಿಯನ್ನು ಡಿ.ಪಿ.ಆರ್. ನಲ್ಲಿ ಮಾಡುವ ಕೆಲಸ ಈಗಾಗಲೇ ಆಗುತ್ತಿದೆ. ನಮ್ಮ ಬೇಡಿಕೆ ಏನಿದೆ ಎಂದರೆ, ಈವರೆಗೆ ನಮ್ಮ ಭಾಗದ ಪ್ರದೇಶಗಳಿಗೆ ಹೇಳಿಕೊಳ್ಳುವುದು ಎಂದರೆ, ಬಹುಶಃ ಎಸ್.ಎಂ.ಕೃಷ್ಣ ರವರ ಸರ್ಕಾರದಲ್ಲಿ ಎರಡು ಸಣ್ಣ ಕುಡಿಯುವ ನೀರಿನ ಯೋಜನೆಗಳು. ಒಂದು

ಬಾಗೇಪಲ್ಲಿಯ ಚಿತ್ರಾವತಿ ಯೋಜನೆಗೆ 10–15 ಕೋಟಿ ರೂ. ವಿನಿಯೋಗಿಸಿ ಚಿತ್ರಾವತಿ ಅಣೆಕಟ್ಟೆ ನಿರ್ಮಾಣ ಮಾಡಿಸಿದರು. ಸನ್ಮಾನ್ಯ ಜಾಲಪ್ಪ ರವರು ಆಗಿನ ಸಂಸತ್ ಸದಸ್ಯರಾಗಿದ್ದರು. ಅದರಿಂದ ಬಾಗೇಪಲ್ಲಿಯ ಕೆಲವು ಹಳ್ಳಿಗಳಿಗೆ ನೀರು ಕೊಡುವ ಕೆಲಸವಾಯಿತು ಮತ್ತು ನಮ್ಮ ಗೌರಿಬಿದನೂರು ತಾಲ್ಲೂಕಿನಲ್ಲಿ ಕಿಂಡಿ ಅಣೆಕಟ್ಟೆ ಎಂದು ಒಂದು ಯೋಜನೆ ರೂಪಿಸಿ, ಉತ್ತರ ದಿನಾಕಿನಿ ನದಿಗೆ 5 ಕೋಟಿ ರೂ ವೆಚ್ಚ ಮಾಡಿದ್ದು ಬಿಟ್ಟರೆ ಅದಕ್ಕಿಂತ ದೊಡ್ಡ ಯೋಜನೆಗಳು ಯಾವುದೂ ಕೂಡ ನೀರಾವರಿ ಯೋಜನೆಗಳು ಈ ಭಾಗದಲ್ಲಿ ಆಗಿಲ್ಲದೇ ಇರುವುದು ಬಹಳ ಶೋಚನೀಯ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಹಾಗಾಗಿ, ಸರ್ಕಾರ ಈ ಎರಡೂ ಯೋಜನೆಗಳನ್ನು ತ್ವರಿತ ಗತಿಯಲ್ಲಿ ಹಮ್ಮಿಕೊಂಡು ಅನುಷ್ಠಾನಗೊಳಿಸಬೇಕು. ಎತ್ತಿನಹೊಳೆ ಯೋಜನೆಯನ್ನು ಈ ತಕ್ಷಣವೇ ಅನುಷ್ಠಾನಗೊಳಿಸುವುದು ಬಹಳ ಮುಖ್ಯವಾದುದು. ಹಿಂದಿನ ಸರ್ಕಾರಗಳು ಈ ಯೋಜನೆಯ ಅನುಷ್ಠಾನಕ್ಕಾಗಿ ಪ್ರತಿ ವರ್ಷವೂ ಬಜೆಟ್‌ನಲ್ಲಿ ಒಂದು ಸಲ 300 ಕೋಟಿ ರೂ. ನಿಗದಿಪಡಿದರೆ ಮತ್ತೊಂದು ಸಲ 400 ಕೋಟಿ ರೂ. ನಿಗದಿಪಡಿಸುತ್ತಿದ್ದವು. ಆದರೆ, ಈ ಯೋಜನೆಯ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ಪ್ರತಿ ವರ್ಷವೂ 1,500 ಕೋಟಿ ರೂ.ಗಳನ್ನು ನಿಗದಿಪಡಿಸಬೇಕು. ಇದಕ್ಕೆ ತಾವು ಕೇಂದ್ರ ಸರ್ಕಾರದ ನೆರವು ಪಡೆಯುತ್ತೀರೋ ಇಲ್ಲವೇ ರಾಜ್ಯ ಸರ್ಕಾರವೇ ಭರಿಸುತ್ತದೋ.....

ಅಧ್ಯಕ್ಷರು : ತಾವು ಬೇಗ ಮುಗಿಸಬೇಕು.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ನಾವು ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬೇಕಾಗಿರಲಿಲ್ಲ. ಎರಡೂ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ನಾವುಗಳು ಜೀವಂತ ಹೆಣಗಳಾಗಿ ಬದುಕಿದ್ದೇವೆ! ನಿಮ್ಮ ಬಳಿ ಬಂದು ಸದನದ ಅವಧಿಯನ್ನು ವಿಸ್ತರಿಸಿ ಎಂದು ಮನವಿ ಮಾಡಿಕೊಂಡು ನಿಯಮ 69ರಡಿ ಈ ವಿಷಯ ಪ್ರಸ್ತಾಪಿಸಲು ಕಲಾಪದ ಪಟ್ಟಿಯಲ್ಲಿ ಇದನ್ನು ಸೇರಿಸಿದ್ದಾಯಿತು. ಈಗ ನೀವು ಕಿವಿಗೆ ಹೆಡ್‌ಫೋನ್ ಹಾಕಿಕೊಂಡು 'ಮುಗಿಸಿ' ಎಂದರೆ ಹೇಗೆ? ಕೇವಲ ಮೂರು ನಿಮಿಷಗಳಿಗೆ ನಮಗ್ಯಾರಿಗೂ ಮಾತನಾಡುವ ಚಟವಿಲ್ಲ. ಮಾತನಾಡುವ ಚಟಕ್ಕೆ ಈ ವಿಷಯವನ್ನು ಪ್ರಾಸ್ತಾಪಿಸಿಲ್ಲ. ನಿಮಗೆ ಅಷ್ಟು ತಾಳ್ಮೆ ಇಲ್ಲದೇ ಹೋದರೆ, ಇಲ್ಲಿಗೆ ಮಾತನಾಡುವುದನ್ನು ನಿಲ್ಲಿಸಲು ನನ್ನ ಗೆಳೆಯನಿಗೆ ಹೆಳುತ್ತೇನೆ.

We will stop. You can carry on. ಅತ್ಯಂತ ಗೌರವದಿಂದ ಹೇಳುತ್ತಿದ್ದೇನೆ. ನಾವು 12 ಮಂದಿ ಶಾಸಕರು ಬೆಳಗ್ಗೆಯಿಂದ ಕುರಿಗಳಂತೆ ಕಾಯ್ದುಕೊಂಡು ಕುಳಿತಿದ್ದೇವೆ. ಆದರೆ ವಿಷಯ ಪ್ರಸ್ತಾಪಿಸಲು ಬೆಳಗ್ಗೆ ಅವಕಾಶ ಕೊಡುತ್ತೇನೆ, ಮಧ್ಯಾಹ್ನ ಅವಕಾಶ ಕೊಡುತ್ತೇನೆಂದು ಈಗ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. If you are in a hurry, if you want to complete it, please go ahead, we will close. ನಮ್ಮದೇನೂ ಇಲ್ಲ. We will withdraw the subject.

Mr.SPEAKER : No,No.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ನಮ್ಮ ಜಿಲ್ಲೆಯ ಪರಿಸ್ಥಿತಿ ಏನಿದೆ ಎಂಬುದು ನಮಗಷ್ಟೇ ಗೊತ್ತಿದೆ. ನಾಳೆ ಸದನವನ್ನು ಮುಂದೂಡಿದರೆ ನಮ್ಮ ಊರಿನ ಜನರಿಗೆ ನಾವ್ಯಾರೂ ಮುಖ ತೋರಿಸುವಂತಿಲ್ಲ. ನಿಮಗೆ ತಾಳ್ಮೆ ಇದ್ದರೆ ದಯವಿಟ್ಟು ನಮ್ಮ ಮಾತುಗಳನ್ನು ಪೂರ್ತಿಯಾಗಿ ಕೇಳಿ, ನಮ್ಮ ನೋವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕು. ಇಲ್ಲದೇ ಇದ್ದರೆ, ನಿಮಗೆ ಸಹನೆ ಇಲ್ಲವೆಂದು ಹೇಳಿ, ನಾವು ಹೊರಟು ಹೋಗುತ್ತೇವೆ. ಅದು ನಮ್ಮ ಕರ್ಮ.

ಅಧ್ಯಕ್ಷರು : ಆಯಿತು, ಮಾತನಾಡಿ.

ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ : ಇದು ಬಹಳ ಮಹತ್ವವಾದ ವಿಚಾರವಾಗಿರುವುದರಿಂದ, ಈ ಕುರಿತು ಬಹಳಷ್ಟು ತಾಲ್ಲೂಕುಗಳ ಪ್ರತಿನಿಧಿಗಳು ಮಾತನಾಡುವವರಿದ್ದಾರೆ. ಎತ್ತಿನಹೊಳೆ ಯೋಜನೆ ಅನುಷ್ಠಾನಕ್ಕಾಗಿ ಸರ್ಕಾರವು ಪ್ರತಿ ವರ್ಷ ಸುಮಾರು 1,500 ಕೋಟಿ ರೂ.ಗಳಷ್ಟು ಹಣವನ್ನು ಮೀಸಲಿಟ್ಟು ಯೋಜನೆಗೆ ಚಾಲನೆ ಕೊಡುವ ಮತ್ತು ಡಾ: ಪರಮಶಿವಯ್ಯನವರ ವರದಿ ರೀತ್ಯಾ.....

ಅಧ್ಯಕ್ಷರು : ನೀವು ಮಾತನಾಡುವುದು ಸರಿಯಾಗಿ ಕೇಳಿಸಲಿ ಎನ್ನುವ ಕಾರಣಕ್ಕೋಸ್ಕರ ಕಿವಿಗೆ ಹೆಡ್‌ಫೋನನ್ನು ಹಾಕಿಕೊಂಡಿದ್ದೇನೆಯೇ ವಿನಾ ಚಂದಕ್ಕಲ್ಲ.

ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ : ಆ ಎರಡೂ ಯೋಜನೆಗಳನ್ನು ಒಟ್ಟುಗೂಡಿಸುವ ಮೂಲಕ Karnataka Water Grid Canal ಮೊದಲನೇ ಹಂತದ ಕುರಿತು ಏನು ಪ್ರಸ್ತಾಪಿಸಿದ್ದಾರೆ, ಅದಕ್ಕೂ ಕೂಡ ಸರ್ಕಾರ ಅನುಮೋದನೆ ನೀಡಿದೆ. ಅದನ್ನೂ ಕೂಡ ಆದಷ್ಟು ಬೇಗ

ಕಾರ್ಯಗತಗೊಳಿಸಬೇಕು ಮತ್ತು ಅದಕ್ಕೂ ಹಣ ಒದಗಿಸಿಕೊಡುವ ಕೆಲಸವಾಗಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇವತ್ತು ನಮ್ಮ ದೇಶದ ಬಜೆಟ್ ಕುರಿತಂತೆ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದುವರೆಗೂ ಒಟ್ಟಾರೆ ಹಮ್ಮಿಕೊಂಡು ಅನುಷ್ಠಾನಗೊಳಿಸಿರುವ ಪಂಚವಾರ್ಷಿಕ ಯೋಜನೆಗಳ ಪೈಕಿ 11ನೇ ಪಂಚವಾರ್ಷಿಕ ಯೋಜನೆಯ ಬಜೆಟ್‌ನಲ್ಲಿ 72,25,632 ಕೋಟಿ ರೂಪಾಯಿಗಳಷ್ಟು ಹಣ ಒದಗಿಸಿದ್ದು, ಇದರಲ್ಲಿ ನೀರಾವರಿ ಯೋಜನೆಗಳಿಗೆ 5,13,339 ಕೋಟಿ ರೂಪಾಯಿಗಳಷ್ಟು ಹಣ ಒದಗಿಸಿದ್ದು, ಇದರಲ್ಲಿ ನೀರಾವರಿ ಯೋಜನೆಗಳಿಗೆ 5,13,339 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಪ್ರಸ್ತುತ 12ನೇ ಪಂಚವಾರ್ಷಿಕ ಯೋಜನೆಯಲ್ಲಿ 47,70,000 ಕೋಟಿ ರೂ.ಗಳಷ್ಟು ಬಜೆಟ್ ನಿಗದಿಪಡಿಸಿದ್ದು, ಇದರಲ್ಲಿ ರಾಷ್ಟ್ರೀಯ ನೀರಾವರಿ ಯೋಜನೆಗಳಿಗೆ 4,66,632 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಇದರಲ್ಲಿ ನಮ್ಮ ರಾಜ್ಯದ ಪಾಲು ಎಷ್ಟೆಂದರೆ, ಡಾ: ಗಾಡ್ಗಿಳ್ ಮತ್ತು ಪ್ರಣಬ್ ಮುಖರ್ಜಿಯವರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸೂತ್ರಗಳ ಹಂಚಿಕೆಯನ್ವಯ ಗರಿಷ್ಠ 1 ಲಕ್ಷ ಕೋಟಿ ರೂ.ಗಳನ್ನು ಮುಂಬರುವ 5 ವರ್ಷಗಳಿಗೆ ನೀರಾವರಿ ಸೌಲಭ್ಯಕ್ಕಾಗಿ ನಿಗದಿಪಡಿಸುವ ಒತ್ತಾಯವನ್ನು ನಾವು ಕೇಂದ್ರ ಸರ್ಕಾರಕ್ಕೆ ಮಾಡಲೇಬೇಕಾಗಿದೆ. ಈ ಹಿನ್ನೆಲೆಯಲ್ಲಿ ವಿಶೇಷವಾಗಿ ನಮ್ಮ ಪ್ರದೇಶದ ಪಿನಾಕಿನಿ–ಪಾಲಾರ್ ನೀರಾವರಿ ನಿಗಮ ಸ್ಥಾಪಿಸುವ ಮೂಲಕ ವಿಶೇಷ ಒತ್ತು ನೀಡಬೇಕು ಮತ್ತು 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ನಿಗಮವನ್ನು A.I.B.P. ಯೋಜನೆಯಡಿ ಸೇರಿಸಬೇಕು.

ಇವತ್ತು ಬಹಳಷ್ಟು ಯೋಜನೆಗಳ ಅನುಷ್ಠಾನದಲ್ಲಿ ಪರಿಸರ, ಅರಣ್ಯ, ಕಾನೂನು ಇನ್ನಿತರ ತಾಂತ್ರಿಕ ಸಮಸ್ಯೆಗಳೆಲ್ಲವೂ ಒಳಗೊಂಡಿರುವುದರಿಂದ ಏಕಗವಾಕ್ಷಿ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಒಂದುಗೂಡಿ ಕೆಲಸ ಮಾಡಿದರೆ ಯೋಜನೆಗಳನ್ನು ಆದಷ್ಟು ತ್ವರಿತವಾಗಿ ರೂಪಿಸಲು ಸಾಧ್ಯವಿದೆ. ಇದೆಲ್ಲದರ ಹಿನ್ನೆಲೆಯಲ್ಲಿ ನಾನು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ನಮ್ಮ ಬೇಡಿಕೆಗಳನ್ನು ತತ್‌ಕ್ಷಣ ಈಡೇರಿಸುವ ಚಿಂತನೆಯನ್ನು ಸರ್ಕಾರ ಮಾಡಬೇಕೆಂದು ವಿನಂತಿ ಮಾಡುತ್ತಾ, ಎರಡು ತಿಂಗಳುಗಳಲ್ಲಿ ಈ ಯೋಜನೆಗೆ ಚಾಲನೆ ನೀಡುವ ಕೆಲಸ ಮಾಡಬೇಕೆಂದು ಸರ್ಕಾರದಲ್ಲಿ ಕೇಳಿಕೊಂಡು ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ

ಕಲ್ಪಿಸಿದ ಮಾನ್ಯ ಸಭಾದ್ಯಕ್ಷರಾದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ಎಂ.ರಾಜಣ್ಣ (ಶಿಡ್ಲಘಟ್ಟ) : ಗೌರವಾನ್ವಿತ ಸಭಾಧ್ಯಕ್ಷರೆ, ನಾನು ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಿಂದ ಪ್ರಪ್ರಥಮವಾಗಿ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದೇನೆ. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಬಯಲುಸೀಮೆಯಲ್ಲಿರುವ ಸಮಸ್ಯೆಗಳು ಏನೆಂಬುದು ತಮಗೆಲ್ಲರಿಗೂ ಹಾಗೂ ಇಡೀ ರಾಜ್ಯಕ್ಕೆ ಸಂಪೂರ್ಣ ಗೊತ್ತಿದೆ. ನಮ್ಮಲ್ಲಿ ಯಾವುದೇ ನದಿಯಾಗಲಿ, ನಾಲೆಗಳಾಗಲಿ ಇಲ್ಲ. ಮಾನ್ಯ ಹಿರಿಯ ಶಾಸಕರು ಹೇಳಿದ ರೀತಿಯಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ನಾವು ಜೀವನ ನಡೆಸುವುದೇ ಬಹಳ ಕಷ್ಟವಾಗಿದೆ. ಒಂದೆಡೆ ಕುಡಿಯುವ ನೀರಿನ ಸಮಸ್ಯೆಯಾದರೆ ಇನ್ನೊಂದೆಡೆ ಕೃಷಿ ಸಮಸ್ಯೆ, ಮತ್ತೊಂದೆಡೆ ಜಾನುವಾರುಗಳಿಗೆ ಕುಡಿಯುವ ನೀರಿಲ್ಲ. ಇಂತಹ ಸಮಸ್ಯೆಗಳು ನಮ್ಮ ಬಯಲುಸೀಮೆ ಜಿಲ್ಲೆಗಳನ್ನು ಕಾಡುತ್ತಿವೆ. ನಮ್ಮ ಜಿಲ್ಲೆಗಳಲ್ಲಿ 1000–1200–1300 ಅಡಿಗಳಷ್ಟು ಆಳಕ್ಕೆ ಕೊಳವೆ ಬಾವಿಗಳನ್ನು ಕೊರೆದು ಹನಿ ನೀರಾವರಿ ಮೂಲಕ ಜೀವನ ನಡೆಸುತ್ತಿದ್ದೇವೆ. ನಮ್ಮ ಜಿಲ್ಲೆಯ ಯಾವುದೇ ಹಳ್ಳಿಗೆ ಹೋದರೂ ಕುಡಿಯುವ ನೀರಿನ ಸಮಸ್ಯೆ ಎಷ್ಟಿದೆಯೆಂದರೆ, ಅದನ್ನು ತಮ್ಮ ಮುಂದೆ ಹೇಳಲು ಸಾಧ್ಯವಿಲ್ಲ. ಜಿಲ್ಲೆಯ ಯಾವುದೇ ಕೃಷಿ ತೋಟಗಳಿಗೆ ಹೋದರೂ ಸಂಪೂರ್ಣವಾಗಿ ಹನಿ ನೀರಾವರಿ ಬಳಸಿಕೊಂಡು ಕೃಷಿ ಮಾಡಲಾಗುತ್ತಿದೆ. ವಿಶೇಷವಾಗಿ, ನನ್ನ ಕ್ಷೇತ್ರದಲ್ಲಿ ರೇಷ್ಮೆ ಬೆಳೆಗೆ ಹೆಚ್ಚು ಒತ್ತು ನೀಡಿರುವುದರಿಂದ ಬಹಳಷ್ಟು ರೈತರು ರೇಷ್ಮೆ ಮತ್ತು ದ್ರಾಕ್ಷಿ ಬೆಳೆಯುವುದರಿಂದ ಯಾವುದೇ ನೀರಿನ ಆಸರೆ ಕಾಣದೆ ನೀರಿನ ಪ್ರತಿ ಹನಿಯನ್ನು ಉಪಯೋಗಿಸಿಕೊಂಡು ಕೃಷಿ ಮಾಡಿ ಬದುಕು ಸಾಗಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸುಮಾರು 10–15 ವರ್ಷಗಳ ಹೋರಾಟದಿಂದ ಬಯಲುಸೀಮೆಗೆ ಶಾಶ್ವತ ನೀರಾವರಿ ಯೋಜನೆಯನ್ನು ಜಾರಿಗೆ ತರದೇ ಇದ್ದರೆ ಖಂಡಿತವಾಗಿ ಕೆಲವೇ ವರ್ಷಗಳಲ್ಲಿ ನಮ್ಮ ಜಿಲ್ಲೆಗಳು ಮರುಭೂಮಿಯಾಗಿ ಮಾರ್ಪಾಟು ಹೊಂದುವುದನ್ನು ಕಣ್ಣಾರೆ ಕಾಣಬಹುದಾಗಿದೆ. ಮತ್ತು ಇದರಿಂದ ಜನರು ವಲಸೆ ಹೋಗಬೇಕಾಗುತ್ತದೆ. ಅಲ್ಲದೆ, ಕೃಷಿ ಸಂಪೂರ್ಣವಾಗಿ ನಿಂತು ಹೋಗುತ್ತದೆಂದು ಹೇಳಬಯಸುತ್ತೇನೆ.

ಇತ್ತಿಚೆಗೆ ಜರುಗಿನ ವಿಧಾನಸಭಾ ಚುನಾವಣೆಯಲ್ಲಿ ಹಿರಿಯ ಮಾನ್ಯ ಸದಸ್ಯರು ಹಾಗೂ ಮಾಜಿ ಸಭಾಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್ ಅವರು ಹೇಳಿದಂತೆ ನಾವೆಲ್ಲರೂ ಜನರ ಮುಂದೆ ಹೋಗಿ ಬೇಡಿಕೆ ಮಂಡಿಸಿದರೆ, ಮುಂದಿನ ದಿನಗಳಲ್ಲಿ ಪಕ್ಷಾತೀತವಾಗಿ ನಾವು ಈ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಯೋಜನೆ ತರುತ್ತೇವೆಂದೂ, ಅದಕ್ಕೋಸ್ಕರ ತಾವೆಲ್ಲರೂ ಮತ ನೀಡಬೇಕೆಂದು ಜನರನ್ನು ಕೇಳಿಕೊಂಡಿದ್ದೇವೆ. ನಾವು ನಮ್ಮ ಕ್ಷೇತ್ರಗಳಿಗೆ ಹೋಗಿ ಯಾವುದೇ ವಿಷಯವಾಗಿ ಚರ್ಚೆ ಮಾಡಬೇಕಾದರೂ, ಪ್ರಪ್ರಥಮವಾಗಿ ಶಾಶ್ವತ ನೀರಾವರಿ ಬಗ್ಗೆ ಚರ್ಚೆ ಮಾಡಬೇಕೇ ಹೊರತು ನಾವ್ಯಾರೂ ಯಾವುದೇ ಅಭಿವೃದ್ಧಿ ಮಾಡಬೇಕೆಮದು ಕೇಳುವುದಿಲ್ಲ ಇಲ್ಲವೇ ಯಾವುದೇ ಅನುದಾನವನ್ನೂ ಕೇಳುವುದಿಲ್ಲ. ಬದಲಿಗೆ ನಮಗೆ ಶಾಶ್ವತವಾಗಿ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ರೈತಾಪಿ ಮತದಾರರು ಕೇಳುತ್ತಿದ್ದಾರೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ರಾಜ್ಯದ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಮೃದ್ಧ ನೀರಿನ ಸೌಲಭ್ಯವಿದೆ. ಇದಕ್ಕೆ ಕಾರಣ ದಿವಂಗತ ಸರ್ ಎಂ.ವಿಶ್ವೇಶ್ವರಯ್ಯನವರು. ಅವರು ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯ ಮುದೇನಹಳ್ಳಿಯಲ್ಲಿ ಹುಟ್ಟಿ ವಿಶ್ವವಿಖ್ಯಾತಿ ಹೊಂದಿದ ಇಂಜಿನೀಯರ್ ಆಗಿದ್ದಾರೆ. ಇವತ್ತು ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಿಗೆ ಯಾವ ರೀತಿ ನೀರಾವರಿ ಸೌಲಭ್ಯ ಒದಗಿಸಿಕೊಟ್ಟಿದ್ದಾರೋ, ಅದೇ ರೀತಿ ಬಯಲುಸೀಮೆಯ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಸೌಲಭ್ಯ ಒದಗಿಸಿಕೊಟ್ಟ ಕೀರ್ತಿ ಬರಬೇಕಾದರೆ, ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೈ ಮುಗಿದು ಬೇಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆಗೆ ನೀರು ತರಬೇಕೆಂದು ಕ್ಷೇತ್ರದ, ಜಿಲ್ಲೆಯ ಜನರ, ಕೃಷಿಕರ ಹಾಗೂ ಬಡವರ ಪರವಾಗಿ ಕೇಳಿಕೊಳ್ಳುತ್ತಿದ್ದೇನೆ. ನೀರಾವರಿ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸದನಕ್ಕೆ ಮಾನ್ಯ ಸದಸ್ಯರಾದ ಶ್ರೀ ಶಿವಶಂಕರ ರೆಡ್ಡಿಯವರು ಒದಗಿಸಿಕೊಟ್ಟಿದ್ದಾರೆ. ಸಮಯಾಭಾವವಿರುವುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಇವತ್ತು ಅತ್ಯಂತ ಜರೂರಾಗಿ ಕುಡಿಯುವ ನೀರು ಮತ್ತು ಕೃಷಿಗೆ ನೀರನ್ನು ದಯಪಾಲಿಸಬೇಕೆಂದು ಮಾನ್ಯ ಸಭಾದ್ಯಕ್ಷರ ಮೂಲಕ ರಾಜ್ಯ ಸರ್ಕಾರಕ್ಕೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕೈ ಮುಗಿದು ಕೇಳಿಕೊಳ್ಳತ್ತೇನೆ. ಬಯಲುಸೀಮೆಯ ಜಜನತೆಯನ್ನು ಉಳಿಸ–

ಬೇಕಾದರೆ ಶಾಶ್ವತ ನೀರಾವರಿ ಸೌಲಭ್ಯ ಒದಗಿಸಿಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ [ಶ್ರೀನಿವಾಸಪುರ] :– ಮಾನ್ಯ ಅಧ್ಯಕ್ಷರೆ, ಕೋಲಾರ, ಚಿಕ್ಕಬಳ್ಳಾಪುರ ಬೆಂಗಳೂರು ಜಿಲ್ಲೆ, ಈ ಮೂರೂ ಜಿಲ್ಲೆಯ ನಮ್ಮ ಜನರ ಪರಿಸ್ಥಿತಿ ಏನಾಗಿದೆ ಎಂದರೆ, ನಾವು ಮಳೆಯನ್ನು ಅವಲಂಬಿಸಿ ಜೀವನ ನಡೆಸುವವರಾಗಿದ್ದೇವೆ. ಯಾವಾಗ ಮಳೆ ಬರುವುದು ಅನಿಶ್ಚಿತವಾಯಿತೋ, ಆಗ ನಮ್ಮ ಕೆರೆಗಳು ಒಣಗಿ ಹೋದವು, ಅಂತರ್ಜಲ ಕುಸಿಯುತ್ತಾ ಬಂತು. ಅಲ್ಲಿಂದ ನಮ್ಮ ದರಿದ್ರ ಪ್ರಾರಂಭವಾಯಿತು. ಒಂದು ವರ್ಷ ಬಿಟ್ಟು ಮತ್ತೊಂದು ವರ್ಷ ಬರುತ್ತಿದ್ದ ಮಳೆ 4–5 ವರ್ಷದ gapಗೆ ಶುರುವಾಯಿತು. ಆಗ ನಮ್ಮಲ್ಲಿ ಅಂತರ್ಜಲ ಕುಸಿಯುವುದರ ಜೊತೆಗೆ bore-well ಸಂಸ್ಕೃತಿ ಪ್ರಾರಂಭವಾಯಿತು. ಮೊದಲಿಗೆ 400–500 ಅಡಿಗಳಿಗೆ ನೀರು ಸಿಗುತ್ತಿತ್ತು. ಈಗ 1000–1200 ಅಡಿಗಳಿಗೆ ಹೋದರೂ ಕೂಡ ನಮಗೆ ನೀರು ಸಿಗುತ್ತಿಲ್ಲ. ನಮ್ಮ ಗೆಳೆಯರಾದ ರಾಜಣ್ಣನವರು ಹೇಳಿದಂತೆ ಈ ಒಂದು ಸಂದರ್ಭ ಏರ್ಪಟ್ಟಿದೆ. ಅನಿಶ್ಚಿತ ಮಳೆಯಿಂದ, ಅಂತರ್ಜಲ ಕುಸಿಯುವುದರಿಂದ ನಮ್ಮ ಬೋರ್‌ವೆಲ್‌ಗಳು ಒಣಗಿ ಹೋಗಿವೆ. ವ್ಯರ್ಥವಾಗಿ ಸಮುದ್ರಕ್ಕೆ ನೀರು ಹರಿದು ಹೋಗುತ್ತಿದೆ. ನಾವು ಯಾರಿಗೂ ಹಿಂಸೆ ಕೊಡುವ ಮಾತು, ತೊಂದರೆ ಕೊಡುವ ಮಾತು ಹೇಳುತ್ತಿಲ್ಲ. ಸಮುದ್ರಕ್ಕೆ ಹರಿದು ಹೋಗುತ್ತಿರತಕ್ಕಂಥ ನೀರನ್ನು ಬೃಹತ್ ಕಾಲುವೆಗಳ ಮೂಖಾಂತರ ನಮಗೆ ಕೊಡಿ, ನಮ್ಮನ್ನು ಬದುಕುವುದಕ್ಕೆ ಬಿಡಿ, ನಮ್ಮ ರಕ್ಷಣೆಗೆ ಬನ್ನಿ ಎಂದು ಮೂರೂ ಜಿಲ್ಲೆಯ ಜನ ಕೇಳುತ್ತಿದ್ದೇವೆ. ಅದನ್ನು ಹೇಗೆ ಮಾಡಬೇಕು? ಏನು? ಎಂಬ ಬಗ್ಗೆ ನಮಗೆ ಇರತಕ್ಕಂಥ ಸ್ವಲ್ಪ ತಿಳುವಳಿಕೆಯಲ್ಲಿ ಸದನದ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ. ಬೆಂಗಳೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ, ಈ ಮೂರೂ ಜಿಲ್ಲೆಗಳಲ್ಲಿ ಒಟ್ಟು 15 ತಾಲ್ಲೂಕುಗಳು ಬರುತ್ತವೆ. ಈ 15 ತಾಲ್ಲೂಕುಗಳಿಗೂ ಸೇರಿ ಒಟ್ಟು 3,870 revenue villages ಅಂದರೆ ಕಂದಾಯ ಗ್ರಾಮಗಳಿವೆ. ಮಜರಾ ಗ್ರಾಮಗಳು 2,500 ಚಿಲ್ಲರೆ ಇವೆ. ಮೂರೂ ಜಿಲ್ಲೆಗಳ ಜನಸಂಖ್ಯೆ 2011ರ Census ಪ್ರಕಾರ 40 ಲಕ್ಷಕ್ಕೆ ಮುಟ್ಟುತ್ತದೆ. ನಮ್ಮ ಜಾನುವಾರುಗಳ ಸಂಖ್ಯೆ 21 ಲಕ್ಷ ಇದೆ. ನಾವು ಸಾಕಿಕೊಂಡಿರತಕ್ಕಂಥ, ನಮ್ಮ ಕೃಷಿಗೋಸ್ಕರ ಆಧಾರವಾಗಿಟ್ಟುಕೊಂಡಿರತಕ್ಕಂಥ ಜಾನುವಾರುಗಳ ಸಂಖ್ಯೆ 21

ಲಕ್ಷವಾಗಿದೆ. Average rainfall 744 mm. ಆಗಿದೆ. ಇದು ಹಿಂದೆ Meteorology Department ನವರು record ಮಾಡಿ ಇಟ್ಟಿರತಕ್ಕಂಥ ಅಂಕಿ ಅಂಶವಾಗಿದೆ. ಮೂರೂ ಜಿಲ್ಲೆಗಳ average rainfall ಇದಾಗಿದೆ. ಈಗ ಕಳೆದ 11 ವರ್ಷಗಳಿಂದ ಈ average rainfall ಶೇಕಡ 51% ಕಡಿಮೆಯಾಗಿದೆ. ಅದೂ ಸಹ consistent ಆಗಿಲ್ಲ. ನಮ್ಮ ಕೆರೆಗಳು ತುಂಬಿ 11 ವರ್ಷಗಳಾಗಿವೆ. ನಮ್ಮ ಕೆರೆಗಳೆಲ್ಲಾ complete ಆಗಿ ಒಣಗಿ ಹೋಗಿವೆ, ರಾಜ ಕಾಲುವೆಗಳೆಲ್ಲಾ ಮುಚ್ಚಿ ಹೋಗಿವೆ. ಸರ್ಕಾರದವರೇ ಮಾಡಿರತಕ್ಕಂಥ estimate ಪ್ರಕಾರ ಕೊರೆದಿರತಕ್ಕಂಥ 3 ಲಕ್ಷ ಬೋರ್‌ವೆಲ್‌ಗಳು ನಿಷ್ಪ್ರಯೋಜನೆಕವಾಗಿದೆ. ಆ ಬೋರ್‌ವೆಲ್‌ಗಳ ಮೇಲೆ ನಾವು ಹೂಡಿರತಕ್ಕಂಥ 2 ಸಾವಿರ ಕೋಟಿ ರೂ.ಗಳ ಬಂಡವಾಳ ವ್ಯರ್ಥವಾಗಿದೆ. ನಾವು ಬದುಕಿದ್ದೇವೆ. ಹೇಗೆ ಬದುಕಿದ್ದೇವೆ ಎನ್ನುವುದು ಒಂದು ವಿಸ್ಮಯ, ಪವಾಡ ಅಷ್ಟೇ. ನಮಗೆ ಈ ಕೆರೆಗಳಿಗೆ ನೀರು ಸಂಗ್ರಹಣೆ ಮಾಡಿಕೊಳ್ಳುವುದಕ್ಕೆ ಇರತಕ್ಕಂಥ ಸಾಮರ್ಥ್ಯ 79.59 ಟಿಎಂಸಿ. ಅಷ್ಟು ಪ್ರಮಾಣದ ನೀರನ್ನು ಸಂಗ್ರಹಿಸಿ ಇಟ್ಟುಕೊಳ್ಳುವಂತಹ ಶಕ್ತಿ ನಮ್ಮ ಕೆರೆಗಳಿಗೆ ಇದೆ. ಇಷ್ಟು ನೀರನ್ನು ಒಂದು ಕಾಲದಲ್ಲಿ ನಾವು accommodate ಮಾಡಿಕೊಳ್ಳುತ್ತಿದ್ದೆವು. ಈಗ ನಮಗೆ ಅಷ್ಟು shortfall ಆಗಿದೆ. ಈ ಕೆರೆಗಳ ಹತ್ತಿರ ಒಟ್ಟು ಅಚ್ಚುಕಟ್ಟು, ನಾನು dry lands ಬಿಟ್ಟು ಬಿಡುತ್ತಿದ್ದೇನೆ, 1,16,750 ಹೆಕ್ಟೇರ್‌ಗಳಾಗಿವೆ. ನಮ್ಮ ಮಾತು ಬಿಡಿ. ನೀರಿಲ್ಲದಿರುವುದರಿಂದ ಇಷ್ಟು ದೊಡ್ಡ ಪ್ರಮಾಣದ ಜಮೀನು ನಿಷ್ಪ್ರಯೋಜಕವಾಗುತ್ತಿದೆ, ಅಲ್ಲಿ ಏನೂ ಮಾಡಲಿಕ್ಕಾಗುತ್ತಿಲ್ಲ. ಇದರ ಪರಿಣಾಮ ನಮ್ಮ ಬದುಕು ಬಿಟ್ಟು, ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಆಗುವುದಿಲ್ಲವೇ? ಕೃಷಿ ಉತ್ಪನ್ನಗಳ ಮೇಲೆ ಆಗುವುದಿಲ್ಲವೇ? ಯಾರಾದರೂ ಆಗಲಿ ನಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಕೆರೆಗಳ ತೂಬುಗಳು ಮುಚ್ಚಿ, ನೀರನ್ನು ಸಂಗ್ರಹಣೆ ಮಾಡಿಕೊಂಡು, semi-dry crops ನಾವು ಮಾಡಿದರೆ, ಬಹುಶಃ 16 ಟಿಎಂಸಿ ಯಷ್ಟು ನೀರು ಹರಿಸಿ ಮಾಡಿಕೊಂಡರೆ, ನಾನು ಆಗಲೇ ಹೇಳಿದಂತೆ 79.59 ಟಿಎಂಸಿ ಆಗುತ್ತದೆ. ನಮ್ಮ ಒಣಭೂಮಿ ನೀರಾವರಿಗೆ, ನೀವು sprinkler ಅಥವಾ ಇನ್ನೊಂದೋ ಅಥವಾ ಯಾವ ರೀತಿ ಮಾಡುತ್ತೀರೋ,

ಆ ರೀತಿ ಮಾಡಿದರೆ, ನಮ್ಮ total requirement 166,24 ಟಿಎಂಸಿ ಬೇಕಾಗುತ್ತದೆ. ಸ್ವಲ್ಪ ಬೇಗ ಬೇಗ ಮುಗಿಸುವ ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ ನನ್ನ ಹತ್ತಿರ ಮಾತನಾಡಿದರು. ಏನಪ್ಪ? ಇದರ ಬಗ್ಗೆ confusion ಇದೆ, ಬೇರೆ ಬೇರೆ ಅಭಿಪ್ರಾಯಗಳಿವೆ ಎಂದರು. ನಿಜ, ಎತ್ತಿನಹೊಳೆಯದ್ದನ್ನು ಹೇಳುತ್ತಿದ್ದಾರೆ. ನಮ್ಮ ಅಗತ್ಯ 164.29 ಟಿಎಂಸಿ, ಎತ್ತಿನಹೊಳೆ ಬಹಳ ಹೆಚ್ಚೆಂದರೆ ನಮಗೆ ಕೊಡತಕ್ಕಂಥದ್ದು 24 ಟಿಎಂಸಿ. ಎತ್ತಿನಹೊಳೆಯನ್ನು ಮುಂದಿಟ್ಟು, 'ಇದು ಮಾಡೋಣ, ಅದನ್ನು ಪಕ್ಕಕ್ಕೆ ಇಡೋಣ' ಎಂದು ಹೇಳಿದರೆ ತಪ್ಪಾಗುತ್ತದೆ. ಯಾರೇ ಮಹಾನುಭಾವರು, ದೊಡ್ಡವರು, ಯಾವುದೇ ಒಂದು ವಿಷಯಕ್ಕೆ ಅದನ್ನು ಹೇಳಿರಲಿ, ಅವರಿಗೆ ನಾನು ಕೇಳತಕ್ಕಂಥದ್ದು ಇಷ್ಟೇ. ನೀವು ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಜಿಲ್ಲೆಗಳಲ್ಲಿ ಎಂದಾದರೂ ಪ್ರವಾಸ ಮಾಡಿದ್ದೀರಾ? ನಮ್ಮ ಕೆರೆಗಳನ್ನು ನೋಡಿದ್ದೀರಾ? ನಮ್ಮ ಬೋರ್‌ವೆಲ್‌ಗಳನ್ನು ನೋಡಿದ್ದೀರಾ? ನಮ್ಮ ಪರಿಸ್ಥಿತಿಯನ್ನು ನೋಡಿದ್ದೀರಾ? ಅಥವಾ ಎಲ್ಲೋ ಕುಳಿತು, ಯಾವುದರ ಮಾಹಿತಿ ಇಲ್ಲದೆ, ತಿಳುವಳಿಕೆ ಇಲ್ಲದೆ, ತಿಳುವಳಿಕೆ ಇಲ್ಲದೆ, ಬೇರೆ ಯಾವುದೋ ಕಾರಣಕ್ಕೆ ನಮ್ಮನ್ನು ಮತ್ತೆ ಇದೇ ಕಷ್ಟದಲ್ಲಿ ಮುಂದುವರೆಸುವುದಕ್ಕೆ ಮಾತನಾಡುತ್ತಿದ್ದೀರಾ? ನಾವು ಯಾರ ದಯೆ ಕೇಳುತ್ತಿಲ್ಲ, ಯಾರ ಕೃಪೆ ಕೇಳುತ್ತಿಲ್ಲ. ಇದು ನಮ್ಮ ಹಕ್ಕು. ನಾವು ಹೇಳುತ್ತಿರುವ ಅಂಕಿ ಅಂಶಗಳು ಸತ್ಯಕ್ಕೆ ದೂರವಾಗಿದ್ದರೆ, ನಮಗೆ ಸಮಾಧಾನ ಹೇಳಿ, 'ಇಲ್ಲಪ್ಪ, ನಿಮಗೆ ತಿಳುವಳಿಕೆ ಇಲ್ಲ, ತಪ್ಪು ಅಂಕಿ ಅಂಶಗಳನ್ನಿಟ್ಟುಕೊಂಡು ವಾದ ಮಾಡುತ್ತಿದ್ದೀರಿ' ಎಂದು ಹೇಳಿ. ಒಂದು ವೇಳೆ ನಿಮಗೆ ತಪ್ಪು ತಿಳುವಳಿಕೆ ಇದ್ದರೆ, ದಯಮಾಡಿ ತಿದ್ದುಕೊಳ್ಳಿ ಎನ್ನುವುದು ನಮ್ಮ ವಿನಂತಿಯಾಗಿದೆ. ಈ ಕಷ್ಟದಲ್ಲಿ ಇವತ್ತಿನವರೆಗೂ ಇಡೀ ರಾಜ್ಯದಲ್ಲಿ ಅತ್ಯಂತ ಹೆಚ್ಚು ಹಾಲು ಉತ್ಪಾದನೆ ಮಾಡತಕ್ಕವರು ನಾವು. ರೇಷ್ಮೆ ಬೆಳೆಯುವುದರಲ್ಲಿ ಮೊದಲ ಎರಡು ಅಥವಾ ಮೂರನೇ ಸ್ಥಾನದಲ್ಲಿದ್ದೇವೆ. ಬೆಂಗಳೂರಿನವರ ಅವಶ್ಯಕತೆಯ ಮುಕ್ಕಾಲು ಭಾಗ ತರಕಾರಿಯನ್ನು ಈ 2–3 ಜಿಲ್ಲೆಗಳವರು ಕಳುಹಿಸುತ್ತೇವೆ. ಇಂತಹ ಹೀನ ಸ್ಥಿತಿಯಲ್ಲೂ ಕೂಡ ನಮ್ಮ contribution ಇದೆ. ನಾವು ಉತ್ಪಾದನೆ ಮಾಡಿದ ಹಾಲು ಅಥವಾ ತರಕಾರಿ ಎಲ್ಲವನ್ನೂ ನಾವೇ ತಿನ್ನುತ್ತಿದ್ದೇವೆಯೇ? ಈ ಬಡತನಕ್ಕೆ ಇನ್ನೊಂದು ಸಾಕ್ಷಿ ಎಂದರೆ, ಬೇರೆ ಏನೂ ಗತಿಯಿಲ್ಲ ಎಂದು, KPSCಗೆ ಹೋಗಿ ನೀವು ತೆಗೆದು

ನೋಡಿದರೆ, ಆ written exam ನಲ್ಲಿ highest marks ತೆಗೆದುಕೊಳ್ಳುವವರು ನಮ್ಮ ಹುಡುಗರೇ, ಏಕೆಂದರೆ, ಆ ಬಡತನ ನಮ್ಮನ್ನು ಕಿತ್ತು ತಿನ್ನುತ್ತಿದೆ. ಏನೋ ಒಂದು ನೌಕರಿಯಾದರೂ ಸಿಗುತ್ತದೆಯೇನೋ, ಅದರಿಂದ ನಮ್ಮ ಸಂಸಾರವನ್ನು ನಡೆಸಿಕೊಂಡು ಹೋಗೋಣ. ಕೆಲವರು ಪ್ರಾಸಂಗಿಕವಾಗಿ ಅದು 'Karnataka Administrative Service' ಅಲ್ಲ, 'Kolar Administrative Service' ಎಂದು ಹೇಳುತ್ತಾರೆ.

ನಮಗೆ ಗತಿ ಇಲ್ಲ. ನಾವು ಆ ಸ್ಥಿತಿಗೆ ಬಂದು ತಲುಪಿದ್ದೇವೆ. ಇದುವರೆವಿಗೂ ನಡೆದಿರುವುದನ್ನು ಹೇಳುವುದಾದರೆ, 1947ರಲ್ಲಿ ಸ್ವಾತಂತ್ರ್ಯ ಬರುತ್ತದೆ, 1948ರಲ್ಲಿ ರಾಜ್ಯ ಮೈಸೂರು ಮಹಾರಾಜರಿಂದ ಬಿಡುಗಡೆಯಾಗುತ್ತದೆ, ಮೊದಲನೆಯ ಮುಖ್ಯಮಂತ್ರಿ ಶ್ರೀ ಕೆ.ಸಿ. ರೆಡ್ಡಿಯವರು ನಮ್ಮವರೇ, ಕೋಲಾರ ಜಿಲ್ಲೆಯವರು. ಅಲ್ಲಿಂದ ಈ ತಾರೀಖಿನ ವರೆವಿಗೂ ಯಾವುದೇ ಸರ್ಕಾರ, ಯಾವುದೇ ಮುಖ್ಯಮಂತ್ರಿ ಈ ಜಿಲ್ಲೆಗಳಲ್ಲಿ ಒಂದು ನೀರಾವರಿ ಯೋಜನೆಯನ್ನು ತೆಗೆದುಕೊಳ್ಳತಕ್ಕಂಥ ಆಲೋಚನೆಯನ್ನಾಗಲಿ, ಪ್ರಯತ್ನವನ್ನಾಗಲಿ, ಮಾಡಿಲ್ಲ. ಈಗ ಮೊದಲನೆಯ ಪ್ರಯತ್ನ. 94 ವರ್ಷ ವಯಸ್ಸಾದ ಡಾ: ಪರಮಶಿವಯ್ಯನವರು ಸುಮಾರು ವರ್ಷಗಳ ಹಿಂದೆ ನಮಗೆ ವರದಿ ಕೊಟ್ಟಿದ್ದಾರೆ. ನಮ್ಮವರು ಇಲ್ಲೆಲ್ಲೋ ಒಂದು ಕಡೆ ನಮಗೆ ಜೀವ ಇದೆ ಎಂದು ಹೇಳಿ, ಅದನ್ನು ಹಿಡಿದುಕೊಂಡು ನೇತಾಡುತ್ತಿದ್ದೇವೆ. ಬೃಹತ್ ನೀರಾವರಿ, ಮಧ್ಯಮ ನೀರಾವರಿ, ಸಣ್ಣ ನೀರಾವರಿ, 15 ತಾಲ್ಲೂಕುಗಳು, 40 ಲಕ್ಷ ಜನಸಂಖ್ಯೆ, 21 ಲಕ್ಷ ಜಾನುವಾರುಗಳು ಇರತಕ್ಕಂಥ ಈ ಭಾಗಕ್ಕೆ ನೀರಾವರಿ ಸಾಲಭ್ಯ ಬೇದವೇ? ಸ್ವಾತಂತ್ರ್ಯ ಬಂದ ದಿವಸದಿಂದ ಇವತ್ತಿನವರೆವಿಗೆ, ಸಣ್ಣ ನೀರಾವರಿಯಲ್ಲಿಯೂ ಕೂಡ ಯಾವುದೇ ಯೋಜನೆಯ ಬಗ್ಗೆ ಯೋಚನೆ ಮಾಡಲಿಲ್ಲ. ಸರಾಸರಿ ಒಂದು ಅಂದಾಜಿನಲ್ಲಿ ಬೃಹತ್ ನೀರಾವರಿಗೆ ಸುಮಾರು 55 ಸಾವಿರದಿಂದ 60 ಸಾವಿರ ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಈ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಖರ್ಚು ಮಾಡಿದೆ. ಬಾಂಬೆ - ಕರ್ನಾಟಕದಲ್ಲಿ irrigated area, ನೀರಾವರಿಗೆ ಒಳಪಟ್ಟಿರತಕ್ಕಂಥದ್ದು, ಎಷ್ಟಿದೆ ಎಂದರೆ ಶೇಕಡ 51 ರಷ್ಟು. ತಪ್ಪಿದ್ದರೆ ಮಾನ್ಯ ಹೆಚ್.ಕೆ.ಪಾಟೀಲ್‌ರವರು ತಿದ್ದಬಹುದು. ಹೈದರಾಬಾದ್ - ಕರ್ನಾಟಕ ಭಾಗದಲ್ಲಿ ಶೇಕಡ 31 ಇದೆ. ಹಳೆ ಮೈಸೂರು

ಭಾಗದಲ್ಲಿ, ಕಾವೇರಿ ಹರಿವು ಈ ಪ್ರಾಂತ್ಯದಲ್ಲಿ ಶೇಕಡ 26.34 ಇದೆ. ಕೋಲಾರ, ಚಿಕ್ಕಬಳ್ಳಾಪುರ ಎಂದರೆ ಅವಿಭಾಜ್ಯ ಕೋಲಾರ ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಯಲ್ಲಿ ನಮ್ಮ ನೀರಾವರಿ ಪ್ರದೇಶ "ದೊಡ್ಡ ಸೊನ್ನೆ". ಒಂದೇ ಒಂದು ರೂಪಾಯಿಯನ್ನೂ ಖರ್ಚು ಮಾಡಿಲ್ಲ. ಅದರ ಮಾತೂ ಇಲ್ಲ, ಅದರ ಶಬ್ದವೂ ಇಲ್ಲ. ಏಕೆ ನಾವಿಷ್ಟು ವೇದನೆಯಿಂದ ಮಾತನಾಡುತ್ತಿದ್ದೇವೆಂದರೆ, ಏಕೆ ನಮ್ಮ ಧ್ವನಿ ಅವರಿಗೆ ಕೇಳಲಿಲ್ಲವೋ, ನಾವೂ ಏಕೆ ಅದರ ಬಗ್ಗೆ ನಿರ್ಲಕ್ಷ್ಯದಿಂದ ಇದ್ದೆವೋ ನಮಗೇ ಗೊತ್ತಿಲ್ಲ. ನಮ್ಮ ಬಗ್ಗೆ ನಮಗೇ ನಾಚಿಕೆಯಾಗುತ್ತಿದೆ. ಮುಳುಗಿಯೇ ಹೋಗುತ್ತಿದ್ದೇವೆ, ಆದ್ದರಿಂದ ಈಗ ಎಚ್ಚೆತ್ತುಕೊಳ್ಳುತ್ತಿದ್ದೇವೆ. ಇಡೀ ಸದನದ ಎಲ್ಲ ಸದಸ್ಯರಲ್ಲಿ ನಾನು ಕೈ ಜೋಡಿಸಿ ಕೇಳುತ್ತೇನೆ, ತಾವು ಯೋಚನೆ ಮಾಡಿ. ಇಷ್ಟು ದೊಡ್ಡ ಪ್ರಮಾಣದ ಹಣ ಖರ್ಚು ಮಾಡಿದರೂ, ನಮಗೆ ಒಂದೇ ಒಂದು ರೂಪಾಯಿ ಬಂದಿಲ್ಲವಲ್ಲ. ನಮ್ಮಿಂದ ಹೋರಾಟವಿಲ್ಲ, ಕೂಗಾಟವಿಲ್ಲ, ಗಲಾಟೆಯಿಲ್ಲ. ರಾಜ್ಯಕ್ಕೆ ನಮ್ಮ contribution ಅನ್ನು ಯಾವ ರೀತಿಯಲ್ಲೂ ನಾವು ಕಡಿಮೆ ಮಾಡಿಲ್ಲ. ಯಾವ ರೀತಿ ನಮ್ಮ ಜನ ಇದನ್ನು ಜೀರ್ಣಿಸಿಕೊಂಡು, ಸಹಿಸಿಕೊಂಡು ಬಂದಿರಬಹುದು? ಬೋರ್‌ವೆಲ್‌ಗಳ ನೀರು ಸಾವಿರ ಅಡಿಗೆ ಹೋದಾಗ, 500 ಅಡಿ ದಾಟಿದಮೇಲೆ, ಭೂ ಗರ್ಭದಲ್ಲಿ ಏನೇನು ಲವಣಾಂಶಗಳಿದ್ದಾವೆ ಅವು ಆ ನೀರಿನಲ್ಲಿ ಬೆರೆತಿರುತ್ತವೆ. ಆ ನೀರು ಕುಡಿಯಲು ಯೋಗ್ಯವೇ, ಅಲ್ಲವೇ ಎಂದು ಯಾರೂ ಹೇಳಲಿಲ್ಲ. ನಮಗೆ ಗತಿ ಇಲ್ಲ, ನಾವು ಅದನ್ನೇ ಕುಡಿಯಬೇಕು. ಆಗಲೇ ಯಾರೋ ಒಬ್ಬರು ಸದಸ್ಯರು fluoride ಬಗ್ಗೆ ಮಾತನಾಡುತ್ತಿದ್ದರು. ಇದುವರೆವಿಗೂ ವಿಜ್ಞಾನಿಗಳು ಕಂಡುಹಿಡಿದಿರುವುದು fluoride, nitrate, arsenic, hardness, iron ಈ ಮೂರು-ನಾಲ್ಕು. ನಮ್ಮಲ್ಲಿ ಏನಾಗಿದೆ ಎಂದು ಹೇಳಿಕೊಳ್ಳಬೇಕಾಗುತ್ತದೆ. ಮಾಮೂಲಿಯಾಗಿ ನಾವು ಕುಡಿಯತಕ್ಕಂಥ, ಉಪಯೋಗಿಸತಕ್ಕಂಥ ನೀರಿನಲ್ಲಿ ಒಂದು ಲೀಟರ್‌ಗೆ ಒಂದು ಮಿಲಿಗ್ರಾಂ ನಷ್ಟು fluoride ಇರಬೇಕು, 45 ಮಿಲಿಗ್ರಾಂ ನಷ್ಟು nitrate ಇರಬೇಕು, 0.3 iron ಇರಬೇಕು, hardness ಬಹಳ ಹೆಚ್ಚೆಂದರೆ 300 ಮಿಲಿಗ್ರಾಂ ಇರಬಹುದು. ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ 173 ಗ್ರಾಮಗಳಲ್ಲಿ fluoride 1.85 mg. ನಿಂದ 2.13 mg. ಗೆ ಬಂದಿದೆ. ಅಂದರೆ ನಾವು ಕುಡಿಯುತ್ತಿರುವುದು ನೀರಲ್ಲ. ವಿಷ ಕುಡಿದು ಬದುಕಿದ್ದೇವೆ.

ಅಧ್ಯಕ್ಷರು : ವಿಷಕಂಠ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಖಂಡಿತ ಆ ಬಿರುದನ್ನು ನೀವು ನಮಗೆ ಕೊಡಬಹುದು. Nitrate 62 mg. ನಿಂದ ಹಿಡಿದು 331 mg. ಚಿಕ್ಕಬಳ್ಳಾಪುರ ಜಿಲ್ಲೆಗೆ ಹೋದರೆ, ನಮ್ಮಲ್ಲಿ 173 ಗ್ರಾಮಗಳಲ್ಲಷ್ಟೆ, ಅವರಲ್ಲಿ 366 ಗ್ರಾಮಗಳಲ್ಲಿ, fluoride 1.68 mg. ನಿಂದ 4 mg. ವರೆಗೂ ಇದೆ. ಕೆಲವು ಊರುಗಳಲ್ಲಿ ಪೈಪ್‌ಗಳಲ್ಲಿ ನೀರು ಬಂದಾಗ ಎರಡು ತಿಂಗಳುಗಳಲ್ಲಿ ಆ ಪೈಪ್‌ನಲ್ಲಿ ಕಾಂಕ್ರೀಟ್ ಹಾಕಿದಂತಾಗುತ್ತದೆ. ಸುಮಾರು ಜನರಿಗೆ ಕಾಲು ನೋವಿನಿಂದ ನಿಂತುಕೊಳ್ಳುವುದಕ್ಕಾಗುವುದಿಲ್ಲ. 30 ವರ್ಷ ಕೂಡ ವಯಸ್ಸು ಆಗಿಲ್ಲ, ಅವರಿಗೆ complete, ಎಲ್ಲಾ ಹಲ್ಲುಗಳೂ ಉದುರಿಹೋಗಿವೆ. ಕೂದಲಿಲ್ಲ ಸಂಪೂರ್ಣವಾಗಿ ಹೊರಟಹೋಗಿದೆ. ಆ ದೃಶ್ಯಗಳನ್ನು ನೋಡುವುದಕ್ಕಾಗುವುದಿಲ್ಲ. ಇವೆಲ್ಲಕ್ಕಿಂತ ಬಹಳ ನೋವಿನ ವಿಚಾರವೆಂದರೆ, ಹೃದಯ ವಿದ್ರಾವಕವಾದ ಸಂಗತಿಯೆಂದರೆ ಗರ್ಭಿಣಿ ಹೆಣ್ಣು ಮಕ್ಕಳು ಯಾರು ಈ ನೀರನ್ನು ಉಪಯೋಗಿಸುತ್ತಿದ್ದಾರೆ, ಅವರ ಸ್ತನದ ಹಾಲು ವಿಷಪೂರಿತವಾಗಿದೆ, ಅದನ್ನು ಮಕ್ಕಳಿಗೆ ಕೊಡುತ್ತಿದ್ದಾರೆ. ಇದು ನನ್ನ ಮಾತಲ್ಲ. ಉತ್ಪ್ರೇಕ್ಷೆ ಅಲ್ಲ. ವಿಜ್ಞಾನಿಗಳು ಹೇಳಿರತಕ್ಕಂಥ ಮಾತು. ದಯಮಾಡಿ ನಮ್ಮ ಪರಿಸ್ಥಿತಿ ಏನಾಗಿರಬಹುದೆಂದು ಊಹಿಸಿಕೊಳ್ಳಿ. ಇದೇ ರೀತಿ ಬೇರೆ ಎಲ್ಲಾದರೂ ಆಗಿದ್ದಾರೆ ಏನು ಮಾಡಿರುತ್ತಿದ್ದಿರಿ ಎಂಬುದನ್ನು ಯೋಚನೆ ಮಾಡಿ. ಮುಂದೆ ಹುಟ್ಟತಕ್ಕಂಥ ಮಕ್ಕಳಿಗೆ ಆ ತಾಯಿ ತನಗೆ ಅರಿವಿದ್ದೂ ವಿಷವನ್ನು ಉಣಿಸಬೇಕು. Alternative ಇಲ್ಲ. ಬರುವುದು, ಕೂಗುವುದು, ಗಲಾಟೆ ಮಾಡುವುದು, ಹೀಗೇ ಆಗುತ್ತಿದೆ.

ಅಧ್ಯಕ್ಷರು : ಅದೂ ಮಾಡಿಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಅದಕ್ಕೂ ನೀವು ಅಡ್ಡ ಬಂದಿರಿ. ಡಾ: ಪರಮಶಿವಯ್ಯನವರ ವರದಿಯಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವಂಥ ನದಿಗಳಿಂದ ಯಾವ ನೀರು ವ್ಯರ್ಥವಾಗಿ ಸಮುದ್ರಕ್ಕೆ ಹೋಗುತ್ತಿದೆ, ಅದನ್ನು ಬೃಹತ್ ಕಾಲುವೆಗಳ ಮುಖಾಂತರ ಈ ಭಾಗಕ್ಕೆ ಹರಿಸಿ ಎಂದು ಇದೆ. ಅವರ ವರದಿ ಪ್ರಕಾರ ಸಕಲೇಶಪುರದ ಹತ್ತಿರ main canal ಪ್ರಾರಂಭವಾಗುತ್ತದೆ. 920 ಮೀಟರ್ ಎತ್ತರದಲ್ಲಿ ಆಗುತ್ತದೆ. ಅಲ್ಲಿಂದ ತುಮಕೂರು ಜಿಲ್ಲೆಗೆ ಬಂದು ಬೆಳಂದೂರು ಎಂಬ ಊರಿಗೆ ಬರುವಷ್ಟು ಹೊತ್ತಿಗೆ ಅಲ್ಲಿ 866 ಮೀಟರ್

ಎತ್ತರವಿರುತ್ತದೆ. ಅಲ್ಲಿ ಕವಲು ಒಡೆಯುತ್ತದೆ. ಒಂದು ಲೈನ್ ನೆಲಮಂಗಲ, ದೇವನಹಳ್ಳಿ, ಮಾಗಡಿ, ಆ ಭಾಗಗಳಿಗೆ ಹೋಗುತ್ತದೆ. ಇನ್ನೊಂದು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ನಮ್ಮ ಗಡಿ ಭಾಗಗಳು, ಶ್ರೀನಿವಾಸಪುರ, ಮುಳಬಾಗಿಲು, ಬಂಗಾರಪೇಟೆ ಆ ಭಾಗಕ್ಕೆ ಬರುತ್ತದೆ. ನಾವು ಕೇಳುತ್ತಿರುವುದು ಇಷ್ಟೆ. ಎತ್ತಿನ ಹೊಳೆ ಯೋಜನೆಯನ್ನು ಕೂಡಲೇ ಜಾರಿ ಮಾಡಿ. ಅದು ಬೇಡ, ಅದನ್ನು ನಿಲ್ಲಿಸಿಬಿಡಿ ಎಂದು ನಾವು ಹೇಳುತ್ತಿಲ್ಲ. ಹೇಮಾವತಿ high flow ಏನಿದೆ, ಪಶ್ಚಿಮಾಭಿಮುಖವಾಗಿ ಹರಿಯತಕ್ಕಂಥ ನೀರೇನಿದೆ ಅದು, ಇದು, ಎತ್ತಿನಹೊಳೆಯದ್ದು, ಮೂರು ಸೇರಿ ಒಂದು ಗ್ರಿಡ್ ಕೆನಾಲ್ ಮಾಡಿ.

ದಯಮಾಡಿ ಪೈಪ್‌ಲೈನ್‌ಗೆ ಹೋಗಬೇಡಿ. ಪೈಪ್ ಲಾಬಿಯವರು ರಣಹದ್ದುಗಳಂತೆ ಕಾದಿದ್ದಾರೆ. ಈ ಪ್ರಾಜೆಕ್ಟ್ clear ಆದರೆ ನಾಳೆಯಿಂದ ಅವರು ಯಾರಿಗೂ ಉಸಿರಾಡುವುದಕ್ಕೆ ಬಿಡುವುದಿಲ್ಲ. ನಮ್ಮ ಹತ್ತಿರ ಪೈಪ್ ತೆಗೆದುಕೊಳ್ಳಿ, ನಮ್ಮ ಹತ್ತಿರ ಪೈಪ್ ತೆಗೆದುಕೊಳ್ಳಿ, ಎಂದು ಅವರು ಆಫರ್‌ಗಳನ್ನು ತೆಗೆದುಕೊಂಡು ಬಂದು ಬಿಡುತ್ತಾರೆ. ಇದಕ್ಕೆ ಯರಗೋಡು ಜೀವಂತ ಸಾಕ್ಷಿ. 2008ರಲ್ಲಿ ಚಾಲನೆ ಕೊಟ್ಟಿದ್ದಾರೆ. 2007ರಲ್ಲಿ ಸರ್ಕಾರ 150 ಕೋಟಿ ರೂಪಾಯಿಗಳಿಗೆ administrative approval ಕೊಡುತ್ತದೆ. 60 ಕೋಟಿ ರೂಪಾಯಿ ಪ್ರಾಜೆಕ್ಟ್ 500 ನೀರು ಕೊಡತಕ್ಕಂಥದ್ದು. ಕೋಲಾರ ಪಟ್ಟಣ, ಮಾಲೂರು, ಬಂಗಾರಪೇಟೆಯ ಕೆಲವು ಗ್ರಾಮಗಳಿಗೆ ಮಾತ್ರ ನೀರುಣಿತಕ್ಕಂಥದ್ದು. ರಾಶಿ ರಾಶಿ ಪೈಪುಗಳನ್ನು ಹಾಕಿದ್ದಾರೆ. ಮತ್ತೆ ಯಾವ ಕೆಲಸವೂ ಇಲ್ಲ. ನೀರು ಎಲ್ಲಿಂದಲಾದರೂ ಬರಲಿ, ಪೈಪ್ ಖರೀದಿ ಮಾಡಿ ಆಯಿತು. ಮತ್ತೆ ನಮ್ಮನ್ನು ಇನ್ನೊಂದು ಎರಡು ಹೋಳು ಮಾಡುವುದಕ್ಕೆ ಹೋಗಬೇಡಿ. ಪೈಪ್‌ಲೈನ್ ಹಾಕಬೇಡಿ. ಗ್ರಿಡ್ ಕೆನಾಲ್ ತೆಗೆಯಬೇಕು, ಮೇನ್ ಕೆನಾಲ್ ತೆಗೆಯಬೇಕು ಎಂಬ ಬಗ್ಗೆ ಸರ್ಕಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಹಿಂದಿನ ಸರ್ಕಾರಗಳು ಇದರ ಬಗ್ಗೆ ಸಾಕಷ್ಟು ಪತ್ರವ್ಯವಹಾರಗಳನ್ನು ಮಾಡಿ, ಇಂಜಿನೀಯರ್ಸ್ ಹಾಗೂ ತಜ್ಞರು ಬಂದು ವಿಚಾರಣೆ ಮಾಡಿ ಮಾಡಬಹುದು ಎನ್ನತಕ್ಕಂತಹ ತೀರ್ಮಾನಕ್ಕೆ ಮಾರ್ಚ್ ತಿಂಗಳಲ್ಲಿ ಆದಂತಹ ಕ್ಯಾಬಿನೆಟ್ ನಲ್ಲಿ ಇವರು ಅಸ್ತು ಎಂದು ಹೇಳಿದ್ದಾರೆ. ಸರ್ಕಾರದ ಆದೇಶ ನಮ್ಮ ಬಳಿ ಇದೆ. ಅಲ್ಲಿಂದ ಮುಂದುವರೆಯಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು confusion

ಇದೆ ಎಂದು ಹೇಳಿದ್ದರಿಂದ ನಾನು ಈ ಮಾತನ್ನು ಹೇಳಬೇಕಾಗಿದೆ. ನಮ್ಮ ಡಿಮ್ಯಾಂಡ್ ಇರುವುದು 629 TMC. ಎತ್ತಿನಹೊಳೆಯಲ್ಲಿ ಬರತಕ್ಕಂಥದ್ದು ಕೇವಲ 24 TMC. ಗ್ರಿಡ್ ಕೆನಾಲ್‌ಗೆ ಸಂಪುಟ ಅಪ್ರೂವಲ್ ಕೊಟ್ಟಿದೆ. ನೀವು ಈ ವ್ಯವಸ್ಥೆಯನ್ನು ಮಾಡಿದರೆ ಕೆಲವು ವರ್ಷಗಳಲ್ಲಿ ನಮ್ಮ ಆಸೆ ಏನಿದೆ ಅದು ನೆರವೇರುತ್ತದೆ. ನಮ್ಮ ಸಮಸ್ಯೆ ಪರಿಹಾರವಾಗುತ್ತದೆ. 920 ಮೀಟರ್ ಹೈಟ್‌ನಿಂದ ಕೆಳಗೆ ಬರುವಂಥದ್ದು ಗುರುತ್ವಾಕರ್ಷಣೆ ಕೋಲಾರದ ಭಾಗಕ್ಕೆ ಬಂದಾಗ ತೀರಾ ಕೆಳಗೆ ಕೆಲವು ಭಾಗಗಳಿಗೆ ನಾವು ಲಿಫ್ಟ್ ಇರಿಗೇಷನ್ ಮಾಡಿಕೊಡಬೇಕಾಗುತ್ತದೆ. ಅದು ಬಿಟ್ಟರೆ ಬೇರೆ ಎಲ್ಲಿಯೂ ಕೂಡ ನೀವು ಬೇರೆ ಪ್ರಯತ್ನ ಮಾಡಬೇಕಾಗಿಲ್ಲ. Gravitational force ಏನಿದೆ, height ನಿಂದ ಕೆಳಗಡೆ ಬರುವಂಥದ್ದು ನೀರಿನ ಗುಣ, flows downwards, ಯಾವ ಸಮಸ್ಯೆ ಕೂಡ ಇಲ್ಲ. ಈ ಎರಡೂ ಯೋಜನೆಗಳಿಗೆ ಜಲಾನಯನ ಪ್ರದೇಶ ಒಂದೇ. ನೀರು ಹರಿಸಬೇಕಾಗಿರುವುದು ಒಂದೇ ಜಾಗಕ್ಕೆ. ಮುಖ್ಯ ಕಾಲುವೆಗೆ ಅಪ್ರೂವಲ್ ಕೊಟ್ಟಿದ್ದಾರೆ. ಸಚಿವ ಸಂಪುಟದ ಟಿಪ್ಪಣಿ "ಮಧ್ಯ ಕರ್ನಾಟಕ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸಲು ಕರ್ನಾಟಕ water grid canal ಅಳವಡಿಸುವ ಬಗ್ಗೆ". ಬಿ.ಜಿ. ಗುರುಪಾದಸ್ವಾಮಿ, ಸರ್ಕಾರದ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ. ಈ ಪತ್ರದಲ್ಲಿ ಏನಿದೆ, I don't want to read the entire letter and take the time of the house. Approval ಕೊಟ್ಟಿದ್ದಾರೆ. ನಿಮಗೆ ಯಾವ ಸಮಸ್ಯೆಯೂ ಇಲ್ಲ. ಗ್ರಿಡ್ ಕೆನಾಲ್‌ಗೆ ಲೈನ್ ಎಸ್ಟಿಮೇಟ್ ಮಾಡುವಂಥದ್ದು tender invite ಮಾಡುವಂಥದ್ದು ನಿಧಾನವಾಗುವುದು ಬೇಡ. ನಾವು ನಾಳೆ adjourn ಆದರೆ ಮತ್ತೆ budget session ಗೆ ಮೀಡ್ ಮಾಡುವುದು. ಬಜೆಟ್ ಸಾಹಸಕ್ಕೆ ಕೈ ಹಾಕುವುದರ ಮೊದಲು ನಮ್ಮ ಬೇಡಿಕೆ ನಿಮಗೆ ಗೊತ್ತಿದ್ದರೆ, ವಾಸ್ತವಾಂಶ ನಿಮಗೆ ಗೊತ್ತಿದ್ದರೆ, ನಡೆದಿರತಕ್ಕಂಥದ್ದೆಲ್ಲಾ ನಿಮಗೆ ಗೊತ್ತಿದ್ದರೆ ಬಜೆಟ್‌ನಲ್ಲಿ ನೀವು ನಮಗೆ ಒಂದು ಹೊಸ ಆಸೆಯನ್ನು ಚಿಗುರಿಸಬಹುದು. ಮೂರೂ ಜಿಲ್ಲೆಗಳ ಜನರ ಬದುಕಿಗೆ ಒಂದು ಹೊಸ ತಿರುವು ಕೊಡಬಹುದು ಎಂದು ತಮ್ಮ ಮುಖೇನ ಮಾನ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಬೇಡಿಕೆಗಳು ಇಷ್ಟೇಅಧ್ಯಕ್ಷರೆ. ನಮ್ಮ ರಾಜ್ಯದ ಮೂರೂ ಜಿಲ್ಲೆಗಳಿಗೆ – ಚಿತ್ರದುರ್ಗ ಜಿಲ್ಲೆ ಇದೆ,

ತುಮಕೂರು ಜಿಲ್ಲೆ ಇದೆ. ಪ್ರಧಾನವಾಗಿ ಈ ಮೂರು ಜಿಲ್ಲೆಗಳನ್ನು ಇಟ್ಟುಕೊಂಡಿದ್ದೇವೆ. ಇದು ತುಮಕೂರು ಜಿಲ್ಲೆ ಇದೆ. ಪ್ರಧಾನವಾಗಿ ಈ ಮೂರು ಜಿಲ್ಲೆಗಳನ್ನು ಇಟ್ಟುಕೊಂಡಿದ್ದೇವೆ. ಇದು ಬಂದರೆ ನಿಮಗೆಲ್ಲಾ ಬೆನಿಫಿಟ್ ಆಗುತ್ತದೆ. ಪ್ರಾದೇಶಿಕವಾಗಿ ನಾವು ಈ ರಾಜ್ಯದ ಒಂದು ಭಾಗ. ಬೇರೆ ಎಲ್ಲಾ ಈ ರಾಜ್ಯದ ಜನತೆ ತೆರಿಗೆ ಕಟ್ಟಿದಂತೆ ನಾವೂ ತೆರಿಗೆ ಕಟ್ಟುತ್ತೇವೆ. ನಮಗೆ ಒಂದೇ ಒಂದು ಪರ್ಸೆಂಟ್ ಕೂಡ ಇರಿಗೇಷನ್ ಆಗಿಲ್ಲ. wehave been subjected to regional injustice. ಡಾ: ನಂಜುಂಡಪ್ಪನವರ ವರದಿ ಪ್ರಕಾರ ಈ ಹದಿನೈದು ತಾಲ್ಲೂಕುಗಳು ಅತ್ಯಂತ ಹಿಂದುಳಿದ ತಾಲ್ಲೂಕುಗಳು. ಡಾ: ನಂಜುಂಡಪ್ಪನವರ ವರದಿ ಪ್ರಕಾರ ಅಂತರ್ಜಲದ ಬಳಕೆ ಪೂರ್ಣ ಲಿಮಿಟ್ ಕ್ರಾಸ್ ಆಗಿ ಈ ಮೂರು ಜಿಲ್ಲೆಗಳಲ್ಲಿ 15 ತಾಲ್ಲೂಕುಗಳಲ್ಲಿ ಆಗಿದೆ. ನಮ್ಮ ಅಂತರ್ಜಲ ರಿ-ಛಾರ್ಜ್ ಪೂರ್ಣ ಆಗುವುದಕ್ಕೆ ಸರ್ಕಾರ ದೊಡ್ಡ ಮನಸ್ಸು ಮಾಡಬೇಕು. ನಮಗೆ ಈ ಮೂರು ಪ್ರಾಜೆಕ್ಟ್ ಏನಿದೆ, ಹೇಮಾವತಿ high flow, West flowing rivers, ಎತ್ತಿನ ಹೊಳೆ, ನಾನು ಈಗಾಗಲೇ ಹೇಳಿದಂತೆ ಅದನ್ನು ರಿಪೀಟ್ ಮಾಡುವ ಅಗತ್ಯವಿಲ್ಲ, ಕಾಮನ್ ಗ್ರಿಡ್ ಮಾಡತಕ್ಕಂಥದ್ದು. ಲೈನ್ ಎಸ್ಟಿಮೇಟ್ ಮಾಡಿ ದಯಮಾಡಿ ವಿಜಯದಶಮಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಗುದ್ದಲಿ ಪೂಜೆ ಮಾಡಬೇಕು. ಶ್ರೀ N.T. ರಾಮರಾಯರು ಆಂಧ್ರದ ಮುಖ್ಯಮಂತ್ರಿಗಳಾಗಿದ್ದಂತಹ ಒಬ್ಬ ಚಲನಚಿತ್ರ ನಟ. ಯಾವ ರಾಜಕೀಯ ಹಿನ್ನೆಲೆ ಅವರಿಗೆ ಇರಲಿಲ್ಲ. ಭಾವುಕರಾಗಿ ಹೇಳುತ್ತಾರೆ. ನನ್ನ ಇಡೀ ಚಲನಚಿತ್ರ ರಂಗದ ಜೀವನ ನಾನು ಮದ್ರಾಸ್‌ನಲ್ಲಿ ಕಳೆದ, ಆಕಸ್ಮಿಕವಾಗಿ ನಾನು ಈ ಅಧಿಕಾರಕ್ಕೆ ಬಂದಿದ್ದೇನೆ. ಮದ್ರಾಸ್ ಜನರಿಗೆ ಕುಡಿಯುವ ನೀರಿನ ತೊಂದರೆ ಇದೆ. ನಾನು ಮದ್ರಾಸ್ ಜನತೆಗೆ "ತೆಲುಗು ಗಂಗಾ" ಮುಖಾಂತರ ಕೃಷ್ಣಾ ನದಿಯಿಂದ ನೀರು ಕೊಡುತ್ತೇನೆಂದು ಹೇಳುತ್ತಾರೆ. ಯೋಚನೆ ಕೂಡ ಮಾಡುವುದಿಲ್ಲ ಆತ ಹೇಗೆ ಆಗುತ್ತದೆ. ಏನು ಎಂದು. ಎರಡೂವರೆ ವರ್ಷದಲ್ಲಿ World Bank assistance ಇಲ್ಲ, Central clearance ಇಲ್ಲ, State resources ನಲ್ಲಿ ಯಾವ ರಾಜಕೀಯ ಹಿನ್ನೆಲೆ ಇಲ್ಲದಂತಹ ಒಬ್ಬ ಚಲನಚಿತ್ರ ನಟ ತಾನು ಹೇಳಿದ ಮಾತು ಉಳಿಸಿಕೊಳ್ಳಬೇಕೆಂದು ಹೇಳಿ ಚಾಲನೆ ಮಾಡುತ್ತಾರೆ, ಇವತ್ತು ಮದ್ರಾಸ್ ನಗರಕ್ಕೆ ನೀರು ಹೋಗುತ್ತಿದೆ. ಬೇರೆ ವಿಚಾರಗಳಲ್ಲಿ ಏನೆಲ್ಲಾ ಇದ್ದರೂ ಕೂಡ

ಗುಜಾರಾತ್‌ನ ಶ್ರೀ ಚಿಮನ್ ಭಾಯಿ ಪಟೇಲ್‌ರವರು ಸರ್ದಾರ್ ನರ್ಮದಾ ಸರೋವರ ವ್ಯಾಲಿ ಪ್ರಾಜೆಕ್ಟ್ ಮಾಡಬೇಕಾಗಿದ್ದರೆ, Environmentalist ಆದ ಮೇಧಾ ಪಾಟ್ಕರ್‌ರವರು ಬಹಳ ಗಲಾಟೆ ಮಾಡಿದರು. ಅವರೂ ಅಷ್ಟೇ Central assistance ಗೆ ಹೋಗಲಿಲ್ಲ. Clear ಮಾಡಿದರು. ಇವತ್ತು ಇಡೀ ಗುಜರಾತ್ ಸಸ್ಯ ಶ್ಯಾಮಲವಾಗಿದೆ. ಬಹಳ ದೂರ ಹೋಗುವುದು ಬೇಡ ಅಧ್ಯಕ್ಷರೆ, 1976 – 77ನೇ ಇಸವಿಯಲ್ಲಿ ವರುಣಾ ನಾಲೆ ಮಾಡಬೇಕೆಂದು ಮಾನ್ಯ ದೇವರಾಜ ಅರಸುರವರು ಹೇಳಿದಾಗ ಇಡೀ ಮಂಡ್ಯ ಜಿಲ್ಲೆಯವರು ಅವರ ಮೇಲೆ ತಿರುಗಿ ಬಿದ್ದರು. ದಿವಂಗತ ಶಂಕರೇಗೌಡರು, ಮಾದೇಗೌಡರು ಇವರೆಲ್ಲಾ ಇಲ್ಲಿಗೆ ಬಂದು ಚೆಡ್ಡಿ ಮೆರವಣಿಗೆ ಮಾಡಿದರು. ಇಡೀ ಮಂಡ್ಯ ಜಿಲ್ಲೆಯ ಜನತೆಗೆ ದೃಷ್ಟಿಯಲ್ಲಿ ದೇವರಾಜ ಅರಸುರವರನ್ನು ಒಬ್ಬ ವಿಲನ್ ಮಾಡಿದರು. 1978 ರ ಅಸೆಂಬ್ಲಿ ಚುನಾವಣೆ ಅದೇ ಆಧಾರದ ಮೇಲೆ ನಡೆಯಿತು. ನಾಗಮಂಗಲದಲ್ಲಿ ಹೆಚ್.ಟಿ. ಕೃಷ್ಣಪ್ಪನವರು ಒಬ್ಬರು ವಿನಾಯಿತಿಸಿ, ಎಲ್ಲರೂ ಈ ಹೊಡೆತಕ್ಕೆ ಸಿಕ್ಕರು. ಆನತಾ ಪಕ್ಷವೇ ಆಯ್ಕೆಯಾಗಿ ಬಂದಿತು. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಪ್ರತಿನಿಧಿಸುತ್ತಿರುವ ಕ್ಷೇತ್ರ ವರುಣಾ constituency ಒಂದು ಸಲ ಮಾನ್ಯ ಮುಖ್ಯಮಂತ್ರಿಗಳು ಹೋಗುವಾಗ ಹೀಗೆ ಮೇಲೆ ನೋಡಲಿ ಎಲ್ಲಿ ಕಟ್ಟಿದ್ದಾರೆ ಪೈಪ್‌ಗಳನ್ನು ಎಂದು. ಇಡೀ ಜನರ ಬಾಯಿಯಲ್ಲಿ ಬೈಯಿಸಿಕೊಂಡು ಅವತ್ತು ದೇವರಾಜ ಅರಸುರವರು ವರುಣಾ ನಾಲೆ ಮಾಡಿದರು. ಎತ್ತಿನ ಹೊಳೆ ಬಗ್ಗೆ ಹೇಳುವವರು, confuse ಮಾಡುವವರು ಇದ್ದೇ ಇರುತ್ತಾರೆ. ಅವತ್ತು ದೇವರಾಜ ಅರಸುರವರು ದೃಢ ನಿರ್ಣಯ ತೆಗೆದುಕೊಂಡು ಹೇಗೆ ವರುಣಾ ನಾಲೆ ಮಾಡಿದರು, ಶ್ರೀ N.T. ರಾಮರಾವ್‌ರವರು ಹೇಗೆ "ತೆಲುಗು ಗಂಗಾ" ಮಾಡಿದರು, ಹಾಗೆ ಮಾಡಿ. ನಮ್ಮ ಜಿಲ್ಲೆಯ ಜನರ ಬದುಕಿಗೆ ಐದೂ ಜಿಲ್ಲೆಗಳ ಜನರ ಬದುಕಿಗೆ ನಾನು ನಿಮ್ಮನ್ನು ಹೊಗಳುವುದಕ್ಕೆ ಈ ಮಾತನ್ನು ಹೇಳುತ್ತಿಲ್ಲ. ಇತಿಹಾಸದ ಒಂದು ಭಾಗ ಆಗಿ ಬಿಡುತ್ತೀರಿ. ಎಲ್ಲರಿಗೂ ಅವಕಾಶಗಳು ಸಿಗುವುದಿಲ್ಲ.

ನಮ್ಮ ಜೀವನದ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಿ ಸಾಲ ಕೊಡುವುದಿಲ್ಲ, ಸಹಕಾರಿ ಸಂಸ್ಥೆಯೆಲ್ಲವೂ ಸುಸ್ತಿ, ಬ್ಯಾಂಕ್‌ನ ರೇಟ್‌ನ್ನು ಕಟ್ಟುವುದಕ್ಕೆ ಆಗುವುದಿಲ್ಲ, ಮಾಡುವುದಕ್ಕೆ ಬೇರೆ ಕೆಲಸ ಗೊತ್ತಿಲ್ಲ, ಕೆರೆಯಲ್ಲಿ ನೀರಿಲ್ಲ, ಬೋರ್‌ವೆಲ್ ಒಣಗಿಹೋಗಿದೆ, ಹೇಗೆ ಜೀವನ ಮಾಡುತ್ತಿದ್ದೇವೆ

ಎನ್ನತಕ್ಕಂಥ ವಿಸ್ಮಯ ಎನ್ನುವುದನ್ನು ಇನ್ನೊಮ್ಮೆ ರಿಪೀಟ್ ಮಾಡಿ ಹೇಳುತ್ತಿದ್ದೇನೆ. ಅದಕ್ಕಾಗಿಯೇ ನಾನು ತಮ್ಮ ಹತ್ತಿರ ಆವೇಶದಲ್ಲಿ, ನಾವು ಜೀವಂತ ಹೆಣಗಳಾಗಿದ್ದೇವೆಂದು ಹೇಳಿದೆ. ದಯಮಾಡಿ ಈ ಎಲ್ಲಾ ಬ್ಯಾಕ್‌ಗ್ರೌಂಡ್‌ನಲ್ಲಿ, ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ, ನಿಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡುವುದಿಲ್ಲ, ನಮ್ಮ ಕೇಸ್‌ನ್ನು ನಾನಿಷ್ಟು plead ಮಾಡಬೇಕಾಗಿತ್ತು, ನಮ್ಮ ಸ್ಥಿತಿ ಏನು, ಸರ್ಕಾರದಿಂದ ನಮಗಾಗಿರುವುದೇನು, ಇದುವರೆಗೂ ಬಂದಿರತಕ್ಕಂಥ ಸರ್ಕಾರಗಳು ಈ ವಿಚಾರದಲ್ಲಿ ಏನು ಪ್ರಗತಿ ಮಾಡಿದೆ, ಅಲ್ಲಿಂದ ಮುಂದಕ್ಕೆ ಹೋಗತಕ್ಕಂಥದ್ದು, ಬರುವ ಬಜೆಟ್ನಲ್ಲಿ ದಯಮಾಡಿ ನೀವು ಗ್ರಿಡ್ ಕೆನಾಲ್‌ಗೆ ಕ್ಲಿಯರೆನ್ಸ್ ಕೊಟ್ಟು ಲೈಸ್ ಎಸ್ಟಿಮೇಟ್‌ಗೆ ಟೆಂಡರ್ ಇನ್‌ವೈಟ್ ಮಾಡಿ ಗುದ್ದಲಿ ಪೂಜೆಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಮೊನ್ನೆ ಚುನಾವಣೆ ಪ್ರಚಾರಕ್ಕಾಗಿ ಹಳ್ಳಿಗಳಿಗೆ ಹೋಗಿದ್ದೆವು, ಎಲ್ಲಾ ಕ್ಯಾಂಡ್‌ಡೇಟ್ಸ್‌ಗಳಲ್ಲಿ ಗೆದ್ದವರು ಮಾತ್ರವೇ ಇಲ್ಲಿಗೆ ಬರುವುದು, ಇಲ್ಲಿ ಎಲ್ಲಾ ಪಾರ್ಟಿಯವರು ಇದ್ದೇವೆ, ಆ ಸುಡು ಬಿಸಿಲಿನಲ್ಲಿ ಮಧ್ಯಾಹ್ನದ ಹೊತ್ತು ಕೆಲವು ಊರುಗಳಿಗೆ ನಾವು ಹೋದರೆ ಅಲ್ಲಿ ಒಂದೊಂದು ಬೋರ್‌ವೆಲ್ ಹತ್ತಿರವು ಐದುನೂರು, ಆರುನೂರು ಜನ ಹೆಣ್ಣುಮಕ್ಕಳು ಬಿಂದಿಗೆಗಳನ್ನು ಹಿಡಿದುಕೊಂಡು ನೀರಿಗೆ ನಿಂತಿದ್ದಾರೆ. ಹೆದರಿ, ಅವರನ್ನು ಓಟ್ ಕೇಳುವುದಕ್ಕೆ ಆ ಕಡೆಗೆ ಹೋಗಾದೆ ತಪ್ಪಿಸಿಕೊಂಡು ಹೋದೆವು. ಈಗ ಹಣ ಕ್ಲಿಯರ್ ಮಾಡಿದ್ದಾರೆ, ಬೋರ್‌ವೆಲ್ ತೋಡುತ್ತಿದ್ದಾರೆ, ಒಂದು ಕಡೆ ನೀರು ಸಿಗುತ್ತಿದೆ, ಒಂದು ಕಡೆ ನೀರು ಸಿಗುತ್ತಿಲ್ಲ, ಸಿಗತಕ್ಕಂಥ ನೀರು ಎಷ್ಟು ದಿವಸ ಇರುತ್ತದೆ ಎನ್ನುವ ಗ್ಯಾರಂಟಿ ಕೂಡ ಇಲ್ಲ. ಕೃಷಿಯ ವಿಚಾರ ಆಮೇಲೆ ಬರುತ್ತದೆ, ಮೊದಲು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳುತ್ತಿದ್ದೇನೆ. ಬಹುಶಃ ಎಲ್ಲಿಗೂ ಇಂಥ ಸ್ಥಿತಿ ಉದ್ಭವವಾಗಿರಲಾರದು. ಅತ್ಯಂತ ದಯನೀಯ ಸ್ಥಿತಿಗೆ ನಾವು ಬಂದು ತಲುಪಿದ್ದೇವೆ. ದಯಮಾಡಿ ನಮ್ಮ ಬೇಡಿಕೆಗಳನ್ನು ಅನುಗ್ರಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮಗೂ ಕೂಡ ಅಲ್ಲಿ ಕುಳಿತು ಕಲಾಪ ನಡೆಸಿ ಸಾಕಾಗಿರುತ್ತದೆ, ಎಲ್ಲೋ ಒಂದು ಕಡೆ ನಾನು ಸ್ವಲ್ಪ ತಾಳ್ಮೆ ಕಳೆದುಕೊಂಡೆ, ಸ್ವಲ್ಪ ಸಿಟ್ಟಿನಲ್ಲಿ ಮಾತನಾಡಿದೆ, ಆದರೆ ನೀವು ನನಗೆ ಬಹಳ ಆತ್ಮೀಯರು, ನಾನು ನಿಮಗಿಂತಲೂ ಚಿಕ್ಕವನು, ನನ್ನನ್ನು ಕ್ಷಮಿಸಬೇಕು, ಮತ್ತೆ ನಮ್ಮ ಎಲ್ಲಾ ಅಳಲನ್ನು ತೋಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ

ನಮ್ಮ ಎಲ್ಲಾ ಜನರ ಪರವಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಪಾಪ, ಹೊಸ ಶಾಸಕರುಗಳಿಗೆ ಇನ್ನೂ ಕಲಾಪಗಳ ಬಗ್ಗೆ ಪರಿಚಯವಿಲ್ಲ, ಎಲ್ಲೋ ಸ್ವಲ್ಪ ತಾಳ್ಮೆ ಕಳೆದುಕೊಂಡು ಹೊರಟುಬಿಟ್ಟಿದ್ದಾರೆ. ಅವರುಗಳ ಪರವಾಗಿಯೂ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಆ ಹೊಸ ಶಾಸಕರುಗಳಾ ಕೂಡ ಕೆಲವರು ಇಲ್ಲಿ ಇದ್ದಾರೆ. ಅವರುಗಳಿಗೂ ಕೂಡ ಒಂದೆರಡು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಕೊಡುತ್ತೇನೆ. ನೀವು ಸಂತೋಷ ವ್ಯಕ್ತಪಡಿಸು-ತ್ತಿದ್ದೀರೇನೋ ಎಂದರೆ, ಏಕೋ ನಿಮ್ಮ ಚರ್ಚೆ ಕೇಳಿದ ಮೇಲೆ **ಜೋಗ** ಜಲಪಾತದ ನೀರನ್ನು ನಾವು ಮೇಲಕ್ಕೆ ತರಬೇಕೆ ಎನ್ನುವ ಯೋಚನೆ ಮಾಡಬೇಕೇನೋ ಎನಿಸುತ್ತಿದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ :- ಯಾವಾಗಲೂ ಹಾಗೆ ಅಧ್ಯಕ್ಷರೆ ಏನು ಮಾಡುತ್ತಿರಿ? ನಿಮಗೆ ರಮಣೀಯವಾದಂಥ ನಿಸರ್ಗವಿದೆ.

ಅಧ್ಯಕ್ಷರು :- ಇದೆ. ಆದರೆ ಕುಡಿಯುವುದಕ್ಕೆ ನೀರಿಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್ :- ಎಂಥ ಕಷ್ಟ ಬಂದರೂ ನೀವು ನಗುತ್ತೀರಿ. ನಮಗೆ ಎಂಥ ಸಂತೋಷ ಬಂದರೂ ನಗುವುದಕ್ಕೇ ಗೊತ್ತಿಲ್ಲ. ಜೀವನವೆಲ್ಲಾ ಬರೀ ಅಳುವುದೇ ಅಭ್ಯಾಸವಾಗಿಬಿಟ್ಟಿದೆ.

ಅಧ್ಯಕ್ಷರು :- ಈಗ ಕೃಷ್ಣಾರೆಡ್ಡಿಯವರು ಮಾತನಾಡಬೇಕು.

ಶ್ರೀ ಎಂ.ಕೃಷ್ಣಾರೆಡ್ಡಿ (ಚಿಂತಾಮಣಿ) :- ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಯಲ್ಲಿ 25 ರಿಂದ 30 ಲಕ್ಷ ಜನಗಳು ನಾವೇನೆದ್ದೇವೆ, ಅದರಲ್ಲಿ 20 ಲಕ್ಷಕ್ಕಿಂತ ಹೆಚ್ಚು ರೈತರುಗಳು ಈ ಎರಡೂ ಜಿಲ್ಲೆಗಳಲ್ಲಿದ್ದೇವೆ. ಕಳೆದ ಹಲವಾರು ವರ್ಷಗಳಿಂದ ಅನೇಕ ರೈತಪರ ಸಂಘಟನೆಗಳು, ಕನ್ನಡಪರ ಸಂಘಟನೆಗಳು, ಅನೇಕ ರಾಜಕೀಯ ಪಕ್ಷಗಳು ಸೇರಿದಂತೆ ಅನೇಕ ವರ್ಷಗಳಿಂದ ಶಾಶ್ವತ ಕುಡಿಯುವ ನೀರಾವರಿ ಬೇಕೆಂದು ಅನೇಕ ಹೋರಾಟಗಳನ್ನು ಮಾಡಿದರೂ ಯಾರಿಗೂ ಕೂಡ ನಮ್ಮ ಕೂಗು ಇವತ್ತಿನವರೆಗೂ ಕೇಳಿಸಿಲ್ಲ. ಆದರೆ ಬಹುಶಃ ನಾನಾದರೂ ಭಾವಿಸುತ್ತೇನೆ ನಮ್ಮ ದುರಾದೃಷ್ಟ, ಈ ರಾಜ್ಯದಲ್ಲಿ ಒಂದು ಸರ್ಕಾರವಿದ್ದರೆ ಕೇಂದ್ರದಲ್ಲಿ ಒಂದು ಸರ್ಕಾರವಿರುತ್ತದೆ. ಮಲತಾಯಿ ಧೋರಣೆಯಾಗುತ್ತಿದೆ. ನಿಜವಾಗಿ ಹೇಳಬೇಕೆಂದರೆ ಈ ಎರಡೂ ಜಿಲ್ಲೆಗಳಲ್ಲಿರತಕ್ಕಂಥವರಿಗೆ ಮಲತಾಯಿ ಧೋರಣೆ

ತೋರಿದ್ದಾರೆ ಎನ್ನುವಂಥ ಮಾತನ್ನು ಈ ಸದನದಲ್ಲಿ ಹೇಳಬೇಕಾಗುತ್ತದೆ. ರಾಜ್ಯ ಸರ್ಕಾರದವರು ಕೇಂದ್ರದ ಮೇಲೆ ಹೇಳುವಂಥದ್ದು, ನಾವು ತಯಾರಿದ್ದೇವೆಯಾದರೂ ಕೇಂದ್ರ ಸರ್ಕಾರ ತಯಾರಿಲ್ಲವೆಂದು ಹೇಳುವುದು, ಕೇಂದ್ರದವರು ಹೇಳುವುದೇನೆಂದರೆ, ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ, ಆದರೆ ಈ ಹಣವನ್ನು ಬಳಸಿಕೊಳ್ಳುವುದಕ್ಕೆ ರಾಜ್ಯ ಸರ್ಕಾರ ತಯಾರಿಲ್ಲವೆನ್ನುವಂಥ ಮಾತನ್ನು ಹೇಳುತ್ತಾರೆ. ಆದರೆ ಎಲ್ಲರೂ ಎಲ್ಲಾ ವೇದಿಕೆಗಳಲ್ಲಿ ಭಾಷಣ ಮಾಡುತ್ತಾರೆ, ಸಮಪಾಲು, ಸಮಬಾಳು ಎನ್ನುತ್ತಾರೆ. ಆದರೆ ಈ ಎರಡೂ ಜಿಲ್ಲೆಗಳಲ್ಲಿರತಕ್ಕಂಥ ಜನ ಇವತ್ತು ಸಮ ಬಾಳನ್ನೂ ಕೂಡ ಕಾಣುತ್ತಿಲ್ಲ. ಸಮ ಪಾಲನ್ನೂ ಕೂಡ ನಾವು ಕಾಣುತ್ತಿಲ್ಲ. ಸಮ ಪಾಲನ್ನೂ ಕೂಡ ನಾವು ಕಾಣುತ್ತಿಲ್ಲ. ಇವತ್ತು ನಿಜವಾಗಿಯೂ ನೀರಾವರಿ ಯೋಜನೆಗಳ ಅನುಷ್ಠಾನದಿಂದ ಸಂಪೂರ್ಣವಾಗಿ ಈ ಎರಡೂ ಜಿಲ್ಲೆಗಳಲ್ಲಿರತಕ್ಕಂಥ ರೈತರುಗಳಾದ ನಾವು ವಂಚಿತರಾಗಿದ್ದೇವೆ. ಹೀಗಾಗಿ ಇನ್ನು ಮುಂದಿನ ದಿನಗಳಲ್ಲಿ ಈ ರಾಜ್ಯದ ಜನ ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರವನ್ನು ಕೊಟ್ಟಿದ್ದಾರೆ, ಕೇಂದ್ರದಲ್ಲಿಯೂ ಕೂಡ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿದೆ. ಹೀಗಾಗಿ ಇನ್ನು ಮುಂದಿನ ದಿನಗಳಲ್ಲಿ ಇಂಥ ತಾರತಮ್ಯ ಮಾಡದೆ ಇನ್ನು ಕೇವಲ ಎರಡ್ಮೂರು ತಿಂಗಳುಗಳಲ್ಲಿ, ಈಗಾಗಲೇ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿರುವಂತೆ ವಿಜಯದಶಮಿಯಂದು ಪೂಜೆಯನ್ನು ಮಾಬೇಕು. ಮುಂದಿನ ಬಜೆಟ್‌ನಲ್ಲಿ ಈ ಸರ್ಕಾರ ಶಾಶ್ವತ ನೀರಾವರಿ ಯೋಜನೆಗೆ ಹಣವನ್ನು ಒದಗಿಸಿ ಕ್ಯಾಜಿನೆಟ್‌ಗೆ ವಿಷಯವನ್ನು ತಂದು ಈ ಒಂದು ಕಾಮಗಾರಿಗೆ ಚಾಲನೆಯನ್ನು ಕೊಡಬೇಕೆನ್ನುವ ಮಾತನ್ನು ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಲು ಬಯಸುತ್ತೇನೆ. ಇದರ ಜೊತೆಗೆ ಈ ಎರಡೂ ಜಿಲ್ಲೆಗಳಲ್ಲಿರುವ ಜನಗಳಿಗೆ ಕುಡಿಯಲು ನೀರಿಲ್ಲ, ಜಾನುವಾರುಗಳಿಗೂ ಕುಡಿಯಲು ನೀರಿಲ್ಲ, ಕೃಷಿಗೂ ಕೂಡ ನೀರಿಲ್ಲ, ಇವೆಲ್ಲವನ್ನೂ ಕೂಡ ನೋಡಿಕೊಂಡು ಮಾನವೀಯತೆ ದೃಷ್ಟಿಯಿಂದ ಸಮಸ್ಯೆ ಪರಿಹರಿಸಲು ನೋಟಿಲ್ಲದಿರುವುದರಿಂದ ಏನಾಗಿದೆಯೆಂದರೆ, ಇವತ್ತು ಬಡ್ಡಿಗೆ ಸಾಲ ಮಾಡಿ ತಿಂಗಳಿಗೆ ನಾಲ್ಕು ಸಾರಿ ಬಡ್ಡಿಯನ್ನು ಕಟ್ಟುತ್ತಿದ್ದಾರೆ. ಈ ರೀತಿ ಸಾಲ ಮಾಡಿ ಬೋರ್‌ವೆಲ್‌ಗಳನ್ನು ತೋಡಿಸಲಾಗುತ್ತಿದೆ, ಈ ಬೋರ್‌ವೆಲ್‌ಗಳಲ್ಲಿ ಅಕಸ್ಮಾತ್ ನೀರು ಸಿಕ್ಕಿದರೆ ಸಿಕ್ಕಿತು, ಇಲ್ಲದಿದ್ದರೆ ಇಲ್ಲ. ಅಕಸ್ಮಾತ್ ನೀರೇನಾದರೂ

ಸಿಕ್ಕಿದರೆ ಅದರಲ್ಲಿ ಫ್ಲೋರೈಡ್ ಇರುವಂಥದ್ದು ಇರುತ್ತದೆ. ಇದರಿಂದಾಗಿ ಜಾನುವಾರುಗಳಿಗೂ ಕೂಡ ಕಾಯಿಲೆ ಬರುವಂಥದ್ದಾಗಿದೆ. ಇವತ್ತು ಜನರಲ್ಲಿ ಅಂಗವಿಕಲತೆಯನ್ನು ಕಾಣುವಂಥದ್ದು ಆಗಿದೆ. ಇವೆಲ್ಲಾ ದೃಷ್ಟಿಯಿಂದಲೂ ನಾವು ಇವತ್ತು ಪಶ್ಚಿಮ ಘಟ್ಟದಿಂದ ನೀರನ್ನು ಹರಿಸಬೇಕೆನ್ನುವ ವಿಚಾರದಲ್ಲಿ ಇವತ್ತು ಡಾ: ಪರಮಶಿವಯ್ಯನವರ ವರದಿಯಿರಬಹುದು, ಮತ್ತೊಂದು ವರದಿಯಿರಬಹುದು, ಈ ದಕ್ಷಿಣ ಭಾಗದಲ್ಲಿರತಕ್ಕಂಥ, ಆ ಭಾಗದಲ್ಲಿರತಕ್ಕಂಥ ಬುದ್ಧಿ ಜೀವಿಗಳು, ಪರಿಸರ ಜೀವಿಗಳು, ಆ ಭಾಗದ ರಾಜಕೀಯ ಮುಖಂಡರು, ಹೀಗೆ ಎಲ್ಲರೂ ಕೂಡ ಸೇರಿಕೊಂಡು ಆ ಒಂದು ವರದಿಯೇನಿದೆ ಅದನ್ನು ಮತ್ತೊಮ್ಮೆ ಅಧ್ಯಯನ್ನು ಮಾಡಿ ನಮ್ಮ ಈ ಎರಡೂ ಜಿಲ್ಲೆಗಳಿಗೆ ನೀರನ್ನು ಒದಗಿಸುವಂಥ ಕೆಲಸವನ್ನು ಮಾಡಬೇಕು ಎನ್ನುವಂಥ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತಾ ನಾನು ಪ್ರಥಮ ಬಾರಿಗೆ ಶಾಸಕನಾಗಿ ಈ ಎರಡು ಜಿಲ್ಲೆಗಳ ರೈತರ ಪರವಾಗಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ತಮಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ವೈ. ರಾಮಕ್ಕ(ಕೆ.ಜಿ.ಎಫ್) :– ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನೀರಿನ ಕೊರತೆ ಬಹಳವಿದೆ. ಇದರಿಂದಾಗಿ ಈಗ ಒಂದು ಸಾವಿರ ಅಡಿಯವರೆವಿಗೂ ಬೋರ್‌ವೆಲ್ ಕೊರೆಸಿದರೂ ಕೂಡ ನಮಗೆ ನೀರು ಸಿಗುವುದು ಬಹಳ ಕಷ್ಟವಾಗಿದೆ. ದನಕರುಗಳಿಗೂ ಕುಡಿಯಲು ನೀರಿಲ್ಲ, ಜನಗಳಿಗೂ ಕೂಡ ಕುಡಿಯುವುದಕ್ಕೆ ನೀರಿಲ್ಲವಾಗಿದೆ. ನಮ್ಮ ಕ್ಷೇತ್ರದಲ್ಲಿ ಹೆಚ್ಚು ಬಡವರೇ ಇದ್ದಾರೆ. ಕೆರೆಗಳು ಮತ್ತು ಬೋರ್‌ವೆಲ್‌ಗಳೆಲ್ಲವೂ ಒಣಗಿಹೋಗಿದೆ. ಆದುದರಿಂದ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಶಾಶ್ವತ ನೀರಾವರಿ ಯೋಜನೆಯನ್ನು ಸರ್ಕಾರ ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೆ, ನಮ್ಮ ಭಾಗಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕು. ಏಕೆಂದರೆ ಹೆಚ್ಚು ಬಡವರೇ ನಮ್ಮ ಕ್ಷೇತ್ರದಲ್ಲಿದ್ದಾರೆ. ಹೆಣ್ಣು ಮಕ್ಕಳು ನೀರು ತರುವುದಕ್ಕೂ ಕೂಡ ನೀರೇ ಇಲ್ಲದಿರುವುದರಿಂದ ಬಹಳ ಕಷ್ಟಪಡುತ್ತಿದ್ದಾರೆ. ನಾನು ಚುನಾವಣಾ ಪ್ರಚಾರಕ್ಕೆ ಹೋಗಿದ್ದಾಗ ಮಳೆ ಹೆಚ್ಚಾಗಿದ್ದಾಗ ಮನೆಗಳಿಗೆಲ್ಲಾ ನೀರು ನುಗ್ಗಿ ಬಹಳ ತೊಂದರೆಯನ್ನು ಪಡುತ್ತಿದ್ದುದ್ದನ್ನು ನಾನು ನನ್ನ ಕಣ್ಣಾರೆ ನೋಡಿದ್ದೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೆ, ನಿಮ್ಮ ಆಶೀರ್ವಾದ

ನಮಗಿರಲಿ. ನಾನು ಕೇಳಿಕೊಳ್ಳುವುದೇನೆಂದರೆ, ನಮ್ಮ ಕ್ಷೇತ್ರದಿಂದ ಬಹಳ ಹೆಣ್ಣು ಮಕ್ಕಳು ಬೆಂಗಳೂರಿಗೆ ಗಾರ್ಮೆಂಟ್ಸ್‌ಗೆ ಬರುತ್ತಿದ್ದಾರೆ. ಅವರನ್ನು ಒಳಗೊಂಡಮತೆ ನಮ್ಮ ಕ್ಷೇತ್ರದ ಜನರಿಗೆ ಸಹಕಾರವನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ.

ಶ್ರೀ ಕೆ.ಎಸ್. ಮಂಜುನಾಥ ಗೌಡ (ಮಾಲೂರು) : ಮಾನ್ಯ ಅಧ್ಯಕ್ಷರೆ, ನನಗೆ ಇವತ್ತು ಮಾತನಾಡಲು ಅವಕಾಶ ಕೊಟ್ಟಿರುವುದಕ್ಕೆ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಮಾಲೂರು ತಾಲ್ಲೂಕು ತಮಿಳುನಾಡು borderಗೆ share ಮಾಡುತ್ತೇವೆ. ಪಕ್ಕದ ತಮಿಳುನಾಡಿನ ಧರ್ಮಪುರಿ ಮತ್ತು ಕೃಷ್ಣಗಿರಿ ಎರಡು ಜಿಲ್ಲೆಗಳಿಗೆ ಜಯಲಲಿತಾರವರು ಮನೆಮನೆಗೆ ಹೊಗೇನಕಲ್ ಫಾಲ್ಸ್‌ನಿಂದ ನೀರನ್ನು ಕೊಟ್ಟಿದ್ದಾರೆ. ಆದರೆ ನಮ್ಮ ದುಸ್ಥಿತಿ ಏನೆಂದರೆ 13–14 ಊರುಗಳು ನಮ್ಮ ತಾಲ್ಲೂಕು borderಗೆ share ಮಾಡುತ್ತೇವೆ. ನಮಗೆ ಕುಡಿಯುವುದಕ್ಕೆ ನೀರಿಲ್ಲ. ನಮ್ಮವರು ಏನು ಮಾಡುತ್ತಾರೆಂದರೆ ರಾತ್ರಿ ಹೊತ್ತು ಅಲ್ಲಿಗೆ ಕಳ್ಳತದಲ್ಲಿ ಹೋಗಿ ನೀರು ಹಿಡಿದುಕೊಂಡು ಬರುತ್ತಾರೆ. ಕಾವೇರಿ ನೀರು ನಮ್ಮದು, ನಾವು ಅವರಿಗೆ ಬಿಟ್ಟು, ನಮಗೆ ಕುಡಿಯುವುದಕ್ಕೆ ನೀರಿಲ್ಲದೆ ಕಳ್ಳತನದಲ್ಲಿ ಹಿಡಿದುಕೊಂಡು ಬರುವಂತಹ ಪರಿಸ್ಥಿತಿಯಾಗಿದೆ. ಯಾವುದೇ ಕೆರೆಗಳಲ್ಲಿ ನೀರು ತುಂಬುದೇ 20 ವರ್ಷಗಳಾಗಿವೆ, ಕುಡಿಯುವುದಕ್ಕೆ ನೀರಿಲ್ಲ. ಹಿರಿಯರಾದ ಮಾನ್ಯ ರಮೇಶ್ ಕುಮಾರ್ ಸಾಹೇಬರು ಸೇರಿದಂತೆ ನಾವೆಲ್ಲರೂ ಶಾಶ್ವತ ನೀರಾವರಿ ಯೋಜನೆಗೆ ಹೋರಾಟ ಮಾಡುವುದಕ್ಕೆ ಏನು ಹೊರಟಿದ್ದೇವೆ, ಇದು ಮೊದಲನೇ ಸಾರಿ ಅಲ್ಲ. ನಾನು ಶಾಸಕನಾಗುವುದಕ್ಕಿಂತ ಮೊದಲು ಕೂಡ ಈ ಹೋರಾಟದಲ್ಲಿ ಪಾಲ್ಗೊಂಡಿದ್ದೇನೆ. ಯಾವ ರೀತಿ ಹೋರಾಟ ಮಾಡಿದ್ದೇವೆಂದರೆ 20,000 ಜನ 343 ಬಸ್ಸುಗಳಲ್ಲಿ ಕರೆದುಕೊಂಡು ಬಂದು ಮಾನ್ಯ ವೀರೇಂದ್ರ ಹೆಗ್ಗಡೆಯವರ ಹತ್ತಿರ ಹೋಗಿ ಅವರ ಹತ್ತಿರ ಮಾತನಾಡಿ ನಮ್ಮ ಕಷ್ಟಗಳನ್ನು ತಿಳಿಸಿ ಬಂದಿದ್ದೇವೆ, ಅವರು ಅದಕ್ಕೆ ಸ್ಪಂದಿಸಿದ್ದಾರೆ. ಇವತ್ತು ನಮ್ಮ ಕರಾವಳಿಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿದ್ದರೆ ಚೆನ್ನಾಗಿರುತ್ತಿತ್ತು. ನಮ್ಮ ಕಷ್ಟ ಅವರಿಗೆ ಗೊತ್ತಿಲ್ಲ. ಮೊನ್ನೆ ನಾನು ನಮ್ಮ ಖಾದರ್ ಸಾಹೇಬರ interview ನೋಡಿದೆ. ಅವರಿಗೆ ಮೀನಿನ ಚಿಂತೆ ಆದರೆ ನಮಗೆ ನೀರಿನ ಚಿಂತೆ. ಅವರಿಗೆ

ಮೀನು ಸತ್ತು ಹೋಗಿಬಿಡುತ್ತದೆ, ತಿನ್ನುವುದಕ್ಕೆ ಇರುವುದಿಲ್ಲವೆಂದು ಚಿಂತೆ. ನಾವು ಮುಂದೆ ಬದುಕುತ್ತೇವೆನ್ನುವ ಗ್ಯಾರಂಟಿ ಇಲ್ಲ. ಇನ್ನು ಎರಡು ವರ್ಷ ನೀರಿಲ್ಲದೆ ಹೇಗೆ ಇರುತ್ತೇವೆಂದು ಗೊತ್ತಿಲ್ಲ. ನಮ್ಮ ಕಡೆ mineral water ಎಂದು ಕೊಡುತ್ತಿದ್ದಾರೆ, ಅದಕ್ಕೂ ಕೂಡ ಒಂದು liquid mix ಮಾಡಿದ್ದು, ಅದೂ ಕೂಡ ವಿಷವೇ ಆಗಿದೆ. ಆಗಿನ ಕಾಲದಲ್ಲಿ ಮಹಾರಾಜರು ಬರಗಾಲ ಅನ್ನುತ್ತಿದ್ದಾಗ ನಮ್ಮ ಪ್ರಜೆಗಳು ಚೆನ್ನಾಗಿರಲಿ ಎಂದು ಅತಿ ಹೆಚ್ಚು ಕೆರೆಗಳನ್ನು ಕೋಲಾರದಲ್ಲಿ ಮಾಡಿದ್ದಾರೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ವಿನಂತಿಯೇನೆಂದರೆ ಮಂಡ್ಯ ಜಿಲ್ಲೆಯ ಪ್ರಜೆಗಳ ಬಗ್ಗೆ ಮಹಾರಾಜರಿಗೆ ಎಷ್ಟು ಕಾಳಜಿ ಇತ್ತು. ಆ ಕಾಳಜಿಯನ್ನು ನೀವೂ ಕೂಡ ತೆಗೆದುಕೊಳ್ಳಿ. ನಮಗೆ ನೀವೇ ಮಹಾರಾಜರು. ದಯವಿಟ್ಟು ನಮಗೆ ನೀರು ಕೊಡಬೇಕೆಂದು ಕಳಕಳಿಯ ಮನವಿಯನ್ನು ಮಾಡಿಕೊಳ್ಳುತ್ತೇವೆ. ಶಾಶ್ವತ ನೀರಾವರಿ ಯೋಜನೆ ಬಗ್ಗೆ ಅಧ್ಯಯನ ಮಾಡಬೇಕಾದರೆ ಶ್ರೀಮಾನ್ ಜವಹರಲಾಲ್ ನೆಹರೂರವರು ಭಾಕ್ರಾನಂಗಲ್ ಡ್ಯಾಂ open ಮಾಡುವುದಕ್ಕೆ ಹೋದಾಗ ಒಂದು ಸಣ್ಣ ನುಡಿಯನ್ನು ನುಡಿದಿದ್ದಾರೆ. 'A Politician thinks of his next election, whereas the statesman thinks of the next generation'. ಎಂದು ಹೇಳಿದ್ದಾರೆ. ನೀವು ಆ ರೀತಿ ರಾಜಕೀಯ ಮುತ್ಸದ್ದಿಗಳಾಗಿ ಎಂದು ಹೇಳುತ್ತೇನೆ. ನೀವು ನಮಗೆಲ್ಲ ಒಂದು ಮಾರ್ಗದರ್ಶನ ತೋರಿಸಿ. ಇಲ್ಲದಿದ್ದರೆ ನಾವು ಮುಂದಿನ ಎಲೆಕ್ಷನ್‌ಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನಿಲ್ಲುವುದಕ್ಕಾಗುವುದಿಲ್ಲ. ನಾವು ರಾಜಕಾರಣಿಗಳು ಬರೀ ಸುಳ್ಳು ಹೇಳಿ ಓಟು ಹಾಕಿಸಿಕೊಂಡು ಮನೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ, ಇಲ್ಲದಿದ್ದರೆ ಕ್ಷೇತ್ರ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ನಾವು ಬರೀ ಸುಳ್ಳು ಹೇಳುತ್ತೇವೆ, ನಾವು ನೀರು ಕೊಡುತ್ತೇವೆಂದು ಕಳೆದ ಹದಿನೈದು ವರ್ಷದಿಂದ ಹೇಳಿಕೊಂಡೇ ಬಂದಿದ್ದೇವೆ. ಹಾಗೆ ಆಗುವುದು ಬೇಡ. ಶಾಶ್ವತ ನೀರಾವರಿ ಯೋಜನೆಗೆ ನೀವೆಲ್ಲ ಕೈಜೋಡಿಸಬೇಕು. ನಾವು ಶಾಶ್ವತ ನೀರಾವರಿ ಯೋಜನೆ ಸಭೆಗಳಿಗೆ ಹೋದಾಗ ಒಂದು ವಿಚಿತ್ರ ಪರಿಸ್ಥಿತಿ ನೋಡುತ್ತೇವೆ. ಒಬ್ಬರು 30,000 ಕೋಟಿ ರೂಪಾಯಿ ಬೇಕಾಗುತ್ತದೆಂದು ಹೇಳಿದರೆ, ಇನ್ನೊಬ್ಬರು 40,000 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಹೇಳುತ್ತಾರೆ. ಸರ್ಕಾರ ಇಷ್ಟೆಲ್ಲಾ ಖರ್ಚು ಮಾಡಿ ನಮಗೆ

ನೀರು ಕೊಡುತ್ತಾರೆಯೇ ಎಂದು ಭಯ ಶುರುವಾಗುತ್ತದೆ. ನಮ್ಮ ಅಲ್ಲಿನ ಪರಿಸ್ಥಿತಿ ನಿಮಗೆ ಯಾರಿಗೂ ಗೊತ್ತಿಲ್ಲ. ಕೋಲಾರ ಜಿಲ್ಲೆಯಲ್ಲಿ ದಿನಬೆಳಗಾದರೆ ಖಾಲಿ ಕೊಡಗಳನ್ನು ಹಿಡಿದುಕೊಂಡು ಎಲ್ಲಿ ನೀರು ಬಿಡುತ್ತಾರೆ, ಅಲ್ಲಿ ಮಹಿಳೆಯರು ಸಾಲುಸಾಲಾಗಿ ನಿಂತುಕೊಂಡು ನೀರು ಹಿಡಿದುಕೊಳ್ಳುತ್ತಾ ರಾಜಕಾರಣಿಗಳನ್ನು ಬೈಯ್ದುಕೊಳ್ಳುವುದು ಸಾಮಾನ್ಯ ದೃಶ್ಯವಾಗಿದೆ. ಇದನ್ನು ಎಲ್ಲಾ ಒಪ್ಪುತ್ತೀರಿ ಎಂದು ತಿಳಿದುಕೊಳ್ಳುತ್ತೇನೆ. ಕೊನೆಯದಾಗಿ ನಮ್ಮ ಕೋಲಾರ ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಶಾಸಕರು ದಯವಿಟ್ಟು ಎಲ್ಲರೂ ಎದ್ದು ನಿಂತುಕೊಳ್ಳಿ. ದಯವಿಟ್ಟು ನಾವು ಕೈಮುಗಿದು ಕೇಳಿಕೊಳ್ಳುತ್ತೇವೆ.

(ಈ ಹಂತದಲ್ಲಿ ಆ ಜಿಲ್ಲೆಯ ಶಾಸಕರುಗಳು ಸದನದಲ್ಲಿ ಎದ್ದುನಿಂತರು)

ನಮಗೆ ನೀವೇ ಮಹಾರಾಜರು, ನಮಗೆ ನೀರು ಕೊಡಿ. ನಿಮ್ಮ ಪ್ರಜೆಗಳು ನೀರಿಲ್ಲದೆ ಸಾಯುತ್ತಿದ್ದಾರೆ. ಅದಕ್ಕೆ ನಮಗೆ ನೀರು ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇವೆ. ನಮಸ್ಕಾರ.

ಅಧ್ಯಕ್ಷರು : ಈಗ ಮುನಿಶ್ಯಾಮಪ್ಪನವರು ಮಾತನಾಡಿ, ಶ್ರೀಮಾನ್ ಸುಬ್ಬಾರೆಡ್ಡಿಯವರು ಮಾತನಾಡಿ.

ಶ್ರೀ ಪಿಳ್ಳ ಮುನಿಶಾಮಪ್ಪ (ದೇವನಹಳ್ಳಿ) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಕ್ಷೇತ್ರದಿಂದ ನಾನು 14ನೇ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದು, ಇಂದು ತಾವು ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ನಾಲ್ಕು ತಾಲ್ಲೂಕುಗಳು ಬರುತ್ತವೆ. ಅದರಲ್ಲಿ ದೇವನಹಳ್ಳಿ ಕೂಡ ಬರುತ್ತದೆ. ದೇವನಹಳ್ಳಿ ತಾಲ್ಲೂಕಿಗೆ ದೊಡ್ಡಬಳ್ಳಾಪುರ ತಾಲ್ಲೂಕಿನ ಒಂದು ಹೋಬಳಿ ಸೇರಿ ನನಗೆ ನೂರು ಹಳ್ಳಿಗಳು ಬರುತ್ತದೆ. ಈ ತಾಲ್ಲೂಕಿನಲ್ಲಿ ಇರುವಂತಹ 300 ಹಳ್ಳಿಗಳಲ್ಲಿ ಈಗಾಗಲೇ 50 ಹಳ್ಳಿಗಳಿಗೆ ನಾವು ಟ್ಯಾಂಕರ್ ಮೂಲಕ ನೀರನ್ನು ಕೊಡುತ್ತಿದ್ದೇವೆ. ಇವತ್ತು ಶಾಶ್ವತ ನೀರಾವರಿ ಯೋಜನೆ ಬಗ್ಗೆ ನಮ್ಮ ಹಿರಿಯ ಅಣ್ಣನಾದಂತಹ ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡಿದ ಮೇಲೆ ನಾನು ಮಾತನಾಡುವ ಅವಶ್ಯಕತೆ ಇಲ್ಲ. ಆದರೂ ಕೂಡ ನಾವು ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಎಲ್ಲರೂ ಕೂಡ ನಾವು ಒಂದೇ ರೀತಿಯಲ್ಲಿ ನೋವನ್ನು ಅನುಭವಿಸುತ್ತಿದ್ದೇವೆ. ಕಳೆದ

ಹದಿನೈದು ವರ್ಷಗಳ ಹಿಂದೆ ದೇವನಹಳ್ಳಿ ತಾಲ್ಲೂಕು ಮತ್ತು ಹೊಸ ಕೋಟೆ ತಾಲ್ಲೂಕು dark area ಎಂದು consider ಮಾಡಿದ್ದಾರೆ. ಬೋರ್ ಕೊರೆಯುವುದಕ್ಕೂ ಕೂಡ ಆಸ್ಪದ ಇಲ್ಲ. ಇವತ್ತು ಅಲ್ಲಿ International Airport ಇದ್ದರೂ ಕೂಡ ಮುಂದಿನ ದಿನಗಳಲ್ಲಿ ನಾವು ಪಡಿತರ ಚೀಟಿಯಲ್ಲಿ ಅಕ್ಕಿ, ಸಕ್ಕರೆ ಮತ್ತು ಸೀಮೆ ಎಣ್ಣೆ ಹೇಗೆ ಕೊಡುತ್ತಿದ್ದೇವೋ, ಅದೇ ರೀತಿ ಪಡಿತರ ಚೀಟಿಯ ಮೂಲಕ ನೀರು ತೆಗೆದುಕೊಳ್ಳುವಂತಹ ಪರಿಸ್ಥಿತಿ ಉದ್ಭವವಾಗುವ ಸಮಯ ದೂರವಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಕುಮಾರಣ್ಣನವರು ಆಯ್ಕೆಯಾಗಿ ಬಂದಿದ್ದು, ಪರಿಪಕ್ವವಾದ ರಾಜಕಾರಣಿಗಳು. ಇಡೀ ರಾಷ್ಟ್ರ ಮತ್ತು ರಾಜ್ಯದ ವಿದ್ಯಮಾನಗಳನ್ನು ತಿಳಿದಂತಹವರು. ಅವರೆಲ್ಲರೂ ಯೋಚನೆ ಮಾಡಿ ಇವತ್ತು ಶಾಶ್ವತ ನೀರಾವರಿ ಯೋಜನೆಗೆ ಹೆಚ್ಚಿನ ಅವಕಾಶವನ್ನು ಮಾಡಿಕೊಡಬೇಕು. ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಲೆವೆಲ್‌ಗಳಲ್ಲಿ ಶಾಶ್ವತ ನೀರಾವರಿ ನಮ್ಮ ಯುವಕರು, ರೈತರು, ದೀನದಲಿತರು ಹೋರಾಟ ಮಾಡುತ್ತಿದ್ದು, ನಮ್ಮ ಪ್ರತಿಯೊಬ್ಬ ಅಕ್ಕ ತಂಗಿಯರೂ ಹೋರಾಟಕ್ಕೆ ಇಳಿಯುವುದಕ್ಕೆ ಅಣಿಯಾಗಿದ್ದಾರೆ. ಆದ್ದರಿಂದ ಇವತ್ತು ಕಾವೇರಿ ಅಚ್ಚುಕಟ್ಟು, ಕೃಷ್ಣಾ ಮೇಲ್ದಂಡೆ, ತುಂಗಭದ್ರಾ ಇರಬಹುದು, ನಾವ್ಯಾರೂ ಕೂಡ ಯಾವುದೇ ವಿಚಾರದಲ್ಲಿ ಸೊಲ್ಲೆತ್ತಿಲ್ಲ. ನಾವು ಕೇಳುತ್ತಿರುವುದೇನೆಂದರೆ ಸುಮಾರು 68–70 ಹಳ್ಳಿಗಳು ಬಯಲುಸೀಮೆ ಪ್ರದೇಶಾಭಿವೃದ್ಧಿಗೆ ಬರುತ್ತವೆ. ಚಿತ್ರದುರ್ಗದಲ್ಲಿ ಕೂಡ ಬಯಲುಸೀಮೆ ಪದೇಶಾಭಿವೃದ್ಧಿ ಮಂಡಲಿ ಮಾಡಿ ಕೇವಲ ಒಂದೊಂದು ಲಕ್ಷ, ಎರಡೆರಡು ಲಕ್ಷ ಅಥವಾ ಐದು ಲಕ್ಷ ರೂಪಾಯಿ ಕೊಟ್ಟು ಕೈತೊಳೆದುಕೊಳ್ಳುತ್ತಿದ್ದೀರಿ. ಸ್ವಾತಂತ್ರ್ಯ ಪೂರ್ವದಿಂದ ಹಿಡಿದು ಸ್ವಾತಂತ್ರ್ಯ ನಂತರವೂ ಕೂಡ ಈ ಯೋಜನೆಗೆ ಅವಕಾಶ ಮಾಡಿಕೊಟ್ಟಿಲ್ಲ. ಮಾನ್ಯ ಮಂಜುನಾಥ ಗೌಡರು ಏನು request ಮಾಡಿಕೊಂಡರು, ಅದೇ ರೀತಿ ಆ ಭಾಗದಲ್ಲಿ ಬರುವ ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಗೆ ಶಾಶ್ವತವಾದ ನೀರನ್ನು ಕೊಟ್ಟು, ಆ ಭಾಗದ ಜನರಿಗೆ ಅವಕಾಶ ಮಾಡಿಕೊಡಬೇಕು. ಇನ್ನು ಮುಂದಿನ ದಿನದಲ್ಲಿ ಈ ರಾಜ್ಯ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಒಂದೊಂದು ತಾಲ್ಲೂಕು ಕೂಡ ಅಭಿವೃದ್ಧಿಯಾಗಬೇಕೆನ್ನುವ ಭಾವನೆಯಿಂದ

ತಾವೆಲ್ಲರೂ ಸಹಕಾರ ಕೊಡಬೇಕೆಂದು ಹೇಳುತ್ತೇನೆ. 224 ಜನ ಶಾಸಕರಿಗೂ ಮಾನ್ಯ ಮುಖ್ಯಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರಲ್ಲಿ ಮನವಿಯನ್ನು ಮಾಡಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸುಬ್ಬಾರೆಡ್ಡಿಯವರು ಮಾತನಾಡಿ. ರವಿ ಹೇಗೆ ಏಕೆ ಮಾಡುತ್ತೀರಿ? Signatories ಇನ್ನೂ ಮಾತನಾಡುವವರಿದ್ದಾರೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನಾವು ನಿಮ್ಮ ಜೊತೆ ಮೀಟಿಂಗ್‌ಗೆ ಬಂದ ಸಂದರ್ಭದಲ್ಲಿ. . .

ಅಧ್ಯಕ್ಷರು : ಸ್ವಲ್ಪ ತಾಳಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ನೀವು ಆಮೇಲೆ adjourn ಮಾಡುತ್ತೀರಿ. ಒಂದು ವಿಷಯ ಕಡತಕ್ಕೆ ಹೋಗಿದೆ, ಅದನ್ನು ಕಡತದಿಂದ ತೆಗೆಯಬೇಕು.

ಡಾ: ಕೆ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ನಮಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಾನು ನೀರಿಗೆ ಸಂಬಂಧಪಟ್ಟ ಹಾಗೆ ಮಾತನಾಡುತ್ತಿದ್ದೇನೆ, ಮುಗಿಸಿಬಿಡುತ್ತೇವೆ ಸರ್.

ಶ್ರೀ ಸಿ.ಟಿ. ರವಿ : ಒಂದು ನಿಮಿಷ ಇರಿ. ಮಾನ್ಯ ಅಧ್ಯಕ್ಷರೆ, ನಾವು ನಿಮ್ಮ ಜೊತೆ ಅರಣ್ಯ ಇಲಾಖೆಗೆ ಸಂಬಂಧಪಟ್ಟಂಥ ಮೀಟಿಂಗ್‌ಗೆ ಭಾಗವಹಿಸಿದಂತಹ ಸಂದರ್ಭದಲ್ಲಿ ಹೇಳಿದ್ದೆವು. ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕರು ನರೇಂದ್ರ ಮೋದಿಯವರ ಬಗ್ಗೆ ಆಕ್ಷೇಪಾರ್ಹ ಪದವನ್ನು ಬಳಕೆ ಮಾಡಿದ್ದಾರೆ. ಅದನ್ನು ಕಡತದಿಂದ ತೆಗೆದು ಹಾಕಬೇಕು ಮತ್ತು ಅದನ್ನು ಮಾಧ್ಯಮಗಳಲ್ಲಿ ಕೂಡ ಪ್ರಕಟ ಮಾಡದಂತೆ ತಾವು ಅವರಿಗೆ ಸೂಚನೆ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ಆ ಒಂದು un-parliamentary ಶಬ್ದವನ್ನು ಕಡತದಿಂದ ತೆಗೆಯಬೇಕು.

ಅಧ್ಯಕ್ಷರು : ಈಗ ಅವರು ಕೊಟ್ಟಿರುವ ಪತ್ರದಲ್ಲಿ ' ಅಂಟಿಕೊಂಡಿದೆ ' ಎನ್ನುವ ಶಬ್ದವನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಡಾ: ಕೆ.ಸುಧಾಕರ್ (ಚಿಕ್ಕಬಳ್ಳಾಪುರ) : ಮಾನ್ಯ ಅಧ್ಯಕ್ಷರೆ, ಇವತ್ತು ಚಿಕ್ಕಬಳ್ಳಾಪುರ ಜಿಲ್ಲೆ, ಕೋಲಾರ ಜಿಲ್ಲೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ

ಸದಸ್ಯರುಗಳು ಮತ್ತು ಹಿರಿಯ ಸದಸ್ಯರಾದಂಥ ಮಾನ್ಯ ರಮೇಶ್‌ಕುಮಾರ್‌ರವರು ಇವತ್ತು ಶಾಶ್ವತ ನೀರಾವರಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮತ್ತು ಒತ್ತಾಯವನ್ನು ಮಾಡಿದ್ದಾರೆ. ನಮ್ಮ ತುಮಕೂರು ಜಿಲ್ಲೆಯ ಕೊರಟಗೆರೆ ವಿಧಾನಸಭಾ ಕ್ಷೇತ್ರದ ಭಾಗದಲ್ಲಿ ನಮ್ಮ ರೈತರು ಮತ್ತು ಜನರು ಬಹಳಷ್ಟು ತೊಂದರೆಯನ್ನು ನಾನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಇವತ್ತು ನಮ್ಮ west-flowing rivers ಎಂದು ಏನು ಹೇಳುತ್ತೇವೆ, ಅದರ ಮುಖಾಂತರವಾಗಿ ಸುಮಾರು 2,000 ಟಿ.ಎಂ.ಸಿ. ನೀರು ಇವತ್ತು ಅರಬ್ಬಿ ಸಮುದ್ರಕ್ಕೆ ಹೋಗುತ್ತಿರುವಂಥದ್ದು ನಮ್ಮ ತಿಳಿವಳಿಕೆಗೆ ಬಂದಿದೆ. ಇವತ್ತು ನಾವು ಡಾ: ಪರಮಶಿವಯ್ಯ ನವರ ವರದಿಯ ಮುಖಾಂತರವಾಗಿ ಸುಮಾರು 83.07 ಟಿ.ಎಂ.ಸಿ. ನೀರನ್ನು ತೆಗೆದುಕೊಳ್ಳುವುದಕ್ಕೆ ಯೋಜನೆಯನ್ನು ರೂಪಿಸುತ್ತಿದ್ದೇವೆ. ಅದೇ ರೀತಿ ಎತ್ತಿನಹೊಳೆ ಯೋಜನೆ ಮುಖಾಂತರವಾಗಿ ಸುಮಾರು 24.01 ಟಿ.ಎಂ.ಸಿ. ನೀರು ಹೇಮಾವತಿ flood flow ಮುಖಾಂತರವಾಗಿ 15TMC ನೀರು. ಒಟ್ಟಾರೆ ಸುಮಾರು 122.08 ಟಿ.ಎಂ.ಸಿ. ನೀರನ್ನು ಮಾತ್ರ ನಾವು ಬಳಸುವುದಕ್ಕೆ ಹೊರಟಿದ್ದೇವೆ. ಇವತ್ತು ನಮ್ಮ ಭಾಗದ ರೈತರು ಇರಬಹುದು, ಜನರಿರಬಹುದು, ಬೋರ್‌ವೆಲ್‌ಗಳನ್ನು ಸಾವಿರ ಅಡಿಯವರೆಗೆ ಕೊರೆದರೂ ಅರ್ಧ ಇಂಚು, ಒಂದು ಇಂಚು ನೀರು ಬರುತ್ತಿದೆ. ಇನ್ನು ಕೆಲವೊಂದು ಸಂದರ್ಭಗಳಲ್ಲಿ ನೀರು ಬಂದರೂ ಕೂಡ ಎರಡು-ಮೂರು ದಿವಸಗಳಲ್ಲಿ ಅದು fail ಆಗಿರುವಂಥದ್ದನ್ನೂ ಕೂಡ ನಾವು ನೋಡಿದ್ದೇವೆ. ಇವತ್ತು ನಮ್ಮ ಈ ಮೂರು ಯೋಜನೆಗಳು ಮೂಲಕ ನೀರನ್ನು ಹರಿಸುವುದಕ್ಕೆ ಹೊರಟಿದ್ದೇವೆ, ಆ ಮೂರು ಯೋಜನೆಗಳ catchment area ಕೂಡ ಒಂದೇ ಆಗಿದೆ. ಮತ್ತೆ ಆ beneficiary ಜಿಲ್ಲೆಗಳು ಕೂಡ ಒಂದೇ ಆಗಿರುವುದರಿಂದ ಬಹುಶಃ ನಮ್ಮ water grid canal ಮುಖಾಂತರವಾಗಿ ನೀರನ್ನು ಹರಿಸಿದರೆ ಬಹುಶಃ ಪೈಪ್ ಲಾಬಿ ಬಗ್ಗೆ ಹಿರಿಯರಾದ ಮಾನ್ಯ ರಮೇಶ್‌ಕುಮಾರ್‌ರವರು ಏನು ಹೇಳಿದರು, ಅದರ ಒತ್ತಡಕ್ಕೆ ಮಣಿಯದೇ ಇವತ್ತು water grid canal ಮೂಲಕ ನೀರನ್ನು ಹರಿಸುವ ಯೋಜನೆಗೆ ಮಾನ್ಯ ಮುಖ್ಯಮಂತ್ರಿಯವರು ವಿಜಯದಶಮಿ ದಿವಸದಂದು ಚಾಲನೆ ನೀಡುತ್ತಾರೆ, ಮುಂದಿನ ಬಜೆಟ್‌ನಲ್ಲಿ ಅದಕ್ಕೆ ಅವಕಾಶವನ್ನೂ ಸಹ ಮಾಡಿಕೊಡುತ್ತಾರೆಂಬ ಆಶಯದೊಂದಿಗೆ ನಾನು

ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಈ ಯೋಜನೆ ತ್ವರಿತಗತಿಯಲ್ಲಿ ಆಗಬೇಕಾಗುತ್ತದೆ. ನಮ್ಮ ರೈತರ ಪರವಾಗಿ ನಾವು ಏನಾದರೂ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆಂದರೆ, ಬಹುಶಃ ಈ ನೀರನ್ನು ಹರಿಸುವಂಥ ಕಾರ್ಯಕ್ರಮವನ್ನು ಹೊರತು ಪಡಿಸಿದರೆ ಬೇರೆ ಯಾವುದೇ ಕಾರ್ಯಕ್ರಮದ ಮುಖಾಂತರವಾಗಿ ನಾವು ಇವತ್ತು ರೈತರ ಪರವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವಂಥ ಮಾತನ್ನು ಹೇಳೀ, ಮತ್ತೊಮ್ಮೆ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಚರ್ಚೆ ಮುಕ್ತಾಯವಾಯಿತು.

ಡಾ : ಕೆ. ಶ್ರೀನಿವಾಸ್‌ಮೂರ್ತಿ (ನೆಲಮಂಗಲ) : ಮಾನ್ಯ ಅಧ್ಯಕ್ಷರೆ, ದಯವಿಟ್ಟು ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ .. ..

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನನಗೆ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಈ ವಿಷಯಕ್ಕೆ ಯಾರ್ಯಾರು signature ಮಾಡಿದ್ದರು, ಅವರಿಗೆಲ್ಲಾ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಮಗೆ ಒಂದು ಅವಕಾಶ ಕೊಡಿ.

ಅಧ್ಯಕ್ಷರು : ಇದಕ್ಕೆ ಬರುವುದಿಲ್ಲ, ಸಾಕು. ಇದರಲ್ಲಿ ನಿಮ್ಮ ಸಹಿ ಇಲ್ಲ.

ಡಾ : ಕೆ. ಶ್ರೀನಿವಾಸ್‌ಮೂರ್ತಿ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ನೆಲಮಂಗಲ ವಿಧಾನಸಭಾ ಕ್ಷೇತ್ರದಿಂದ 15-20 ನಿಮಿಷಕ್ಕೆ ಬೆಂಗಳೂರಿಗೆ ಹತ್ತಿರವಾಗಿ ಇರುವಂಥ ನೆಲಮಂಗಲಕ್ಕೆ ನಮ್ಮ ಪಕ್ಕದ ಜಿಲ್ಲೆಯ ತುಮಕೂರು ಗ್ರಾಮಾಂತವಾಗಲಿ, ಕೊರಟಗೆರೆಗೆ ಆಗಲಿ,ಹೇಮಾವತಿ ನೀರು ಇರುವಂಥದ್ದು ಎಲ್ಲರಿಗೂ ತಿಳಿದಿರುವಂಥ ವಿಷಯವಾಗಿದೆ. ದಯವಿಟ್ಟು ಶಾಶ್ವತ ನೀರಾವರಿ ಯೋಜನೆಯಲ್ಲಿ ನಮಗೂ ಸಹ ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರೆ : Ok, ಮಾನ್ಯ ವರ್ತೂರು ಪ್ರಕಾಶ್‌ರವರೆ, ಮಾತನಾಡಿ.

ಶ್ರೀ ವರ್ತೂರು ಆರ್. ಪ್ರಕಾಶ್ (ಕೋಲಾರ): ಮಾನ್ಯ ಅಧ್ಯಕ್ಷರೆ, ಶಾಶ್ವತ ನೀರಾವರಿ ಯೋಜನೆಯ ವಿಚಾರದಲ್ಲಿ 1948ರ ಸ್ವಾತಂತ್ರ್ಯದ ನಂತರ ಮಾನ್ಯ

ಕೆ.ಸಿ.ರೆಡ್ಡಿಯವರು ಮುಖ್ಯಮಂತ್ರಿಯಾದ ಮೇಲೆ ಆಗಿರುವಂಥ ವಿಚಾರಗಳನ್ನು ಮಾನ್ಯ ರಮೇಶ್‌ಕುಮಾರ್‌ರವರು ಅಂಕಿ-ಅಂಶಗಳ ಸಮೇತ ತಮ್ಮ ಮಾತಿನಲ್ಲಿ ಹೇಳಿದ್ದಾರೆ. ಎರಡೂ ಜಿಲ್ಲೆಗಳಿಂದ ಪ್ರಭಾವಿ ಮಂತ್ರಿಗಳು ಆರಿಸಿ ಬಂದಿದ್ದರೂ ಕೂಡ ಈ ಜಿಲ್ಲೆಗೆ ಶಾಶ್ವತ ನೀರಾವರಿಯನ್ನು ಕೊಡುವುದಕ್ಕೆ ಆಗಲಿಲ್ಲ. ಆದರೆ ಈ ಎರಡೂ ಜಿಲ್ಲೆಗಳಲ್ಲೂ ಇವತ್ತು ನರಕಯಾತನೆ ನಡೆಯುತ್ತಿದೆ, ಈ ವಿಚಾರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಈ ಒಂದು ಸುವರ್ಣ ಸಂದರ್ಭವನ್ನು ಉಪಯೋಗಿಸಿ, ಇವತ್ತು ಈ ಒಂದು ಯೋಜನೆಗೆ ಹೆಚ್ಚು ಅನುದಾನವನ್ನು ಕೊಡುವುದರ ಮೂಲಕ ಈಗಾಗಲೇ ಹಿಂದಿನ ಸರ್ಕಾರ ಎತ್ತಿನಹೊಳೆ ಯೋಜನೆಗೆ 400 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದು, ಪಶ್ಚಿಮಘಟ್ಟಗಳ ನದಿ ಮೂಲದ ನೀರನ್ನು ಕೊಡುವುದಕ್ಕೆ ಈಗಾಗಲೇ line estimate ಸಹ ನಡೆಯುತ್ತಿದೆ. ಆದರೆ ಜೂನ್ ತಿಂಗಳಲ್ಲಿ ನಡೆಯುವಂಥ ಬಜೆಟ್‌ನಲ್ಲಿ ಅಂದಾಜು ಏನು ಇದೆ, ಆ ಅಂದಾಜಿನಲ್ಲಿ 3 ರಿಂದ 4 ವರ್ಷಗಳಲ್ಲಿ ಈ ಯೋಜನೆ ಈ ಸರ್ಕಾರದ 5 ವರ್ಷಗಳು ಪೂರೈಸುವುದರೊಳಗೆ ಆಗುವುದರೊಳಗೆ ಆಗಬೇಕಾಗಿರುವುದರಿಂದ ಇದಕ್ಕೆ ಹೆಚ್ಚು ಹಣವನ್ನು ಮೀಸಲಿಡಬೇಕಾಗಿದೆ. ಉದಾಹರಣೆಗೆ ಹೇಳಬೇಕಾದರೆ, ಕೋಲಾರ ಜಿಲ್ಲೆಯಲ್ಲಿ ಇವತ್ತು railway coach factory ಮಾಡಬೇಕೆಂಬ ವಿಷಯ ಬಜೆಟ್‌ನಲ್ಲಿ ಬಂದು, ಭಾಷಣವೂ ಆಯಿತು. ಈ ಯೋಜನೆ ಗಾತ್ರ 500 ಕೋಟಿ ರೂ.ಗಳಾಗಿದ್ದು, ಆದರೆ 1 ಕೋಟಿ ರೂ.ಗಳನ್ನು ಮಾತ್ರ reserve ಮಾಡಲಾಗಿದೆ. ಈ ಒಂದು ಕೋಟಿ ರೂ.ಗಳಲ್ಲಿ line estimate ಕೂಡ ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ ಇವತ್ತು ಕೋಲಾರ ಮತ್ತು ಚಿಕ್ಕಬಳ್ಳಾಪುರ ಈ ಎರಡೂ ಜಿಲ್ಲೆಗಳಿಗೆ ಮಂತ್ರಿಮಂಡಲದಲ್ಲೂ ಕೂಡ ಅವಕಾಶವಿಲ್ಲ. ಈ ವಿಷಯವಾಗಿ ಮಾನ್ಯ ರಮೇಶ್ ಕುಮಾರ್‌ರವರು ಬಹಳಷ್ಟು ಒತ್ತಡವನ್ನು ತರುತ್ತಿದ್ದಾರೆ. ಹಿಂದೆ ಬಿ.ಜೆ.ಪಿ. ಸರ್ಕಾರವಿದ್ದಾಗಲೂ ಕೂಡ ಈ ಎರಡೂ ಜಿಲ್ಲೆಗಳಿಗೆ ಅಂಥ ಪ್ರಭಾವ ಏನೂ ಇರಲಿಲ್ಲ. ನನಗೆ ಜವಳಿ ಖಾತೆಯನ್ನು ಕೊಟ್ಟಿದ್ದರು, ಆದರೆ ನಾನೂ ಸಹ ವಿಧಾನಸೌಧಕ್ಕೆ ಸುಮ್ಮನೆ ಬಂದು ಹೋಗಿದ್ದು ಬಿಟ್ಟರೆ, ಅಲ್ಲಿ ಏನೂ ಕೆಲಸ-ಕಾರ್ಯಗಳು ಆಗುತ್ತಿರಲಿಲ್ಲ. ಆದರೆ ಇವತ್ತೂ ನಮ್ಮ ಹಿರಿಯರಾದ ಮಾನ್ಯ ರಮೇಶ್ ಕುಮಾರ್‌ರವರು ಅಂಕಿ-ಅಂಶಗಳ ಸಮೇತ ತಮ್ಮ ನೋವನ್ನು ಈ ಸದನದಲ್ಲಿ ವ್ಯಕ್ತಪಡಿಸಿದ್ದಾರೆ.

ಬಜೆಟ್‌ನಲ್ಲಿ ಹಣವನ್ನು reserve ಮಾಡುವಾಗ ಆ ಯೋಜನೆಯ ಗಾತ್ರದ ಕಾಲು ಭಾಗದ ಹಣವನ್ನು reserve ಮಾಡಬೇಕೆಂದು ಹೇಳುತ್ತೇನೆ. ಸನ್ಮಾನ್ಯ ನೀರಾವರಿ ಸಚಿವರಿಗೆ, ಆರ್.ಡಿ.ಪಿ.ಆರ್. ಸಚಿವರಿಗೆ ಒಂದು ಮಾತನ್ನು ಕೇಳಲಿಚ್ಛಿಸುತ್ತೇನೆ. ಈಗಾಗಲೇ ಪತ್ರಿಕೆಗಳಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ 38 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿರುವ ವಿಷಯ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬಂದಿದೆ. ಆದರೆ ಪ್ರತಿ ಜಿಲ್ಲೆಗಳಿಗೂ ನೂರು ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು : ತಾವು ಈಗ ಆ ವಿಷಯಕ್ಕೆ ಹೋಗಬೇಡಿ, ಈ ವಿಷಯ ಮಾತ್ರ ಹೇಳಿ.

ಶ್ರೀ ವರ್ತೂರು ಆರ್.ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಶಾಶ್ವತ ನೀರಾವರಿ ಬರುವುದು ಇನ್ನು 5 ವರ್ಷಕ್ಕೆ, ಇದೇ ಈಗ ಬರುವುದು. ಈಗ ಕುಡಿಯುವುದಕ್ಕೆ ನೀರಿಲ್ಲ, urgentಗೆ ಇದು ಬೇಕಾಗುತ್ತದೆ. ಆದ್ದರಿಂದ ನಮಗೆ ಒಂದು ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ, 6 ಎಂ.ಎಲ್.ಎ.ಗಳು ಇದ್ದು, ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರು. ಬೋರ್‌ವೆಲ್‌ಗಳು ಹಾಕುತ್ತಿದ್ದಾರೆ, ನೀರು ಸಿಕ್ಕರೆ ಸಿಕ್ಕಿತು, ಇಲ್ಲವೆಂದರೆ ಇಲ್ಲ. ಈಗ ಕೊಟ್ಟಿರುವಂಥ ಹಣದಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಹಾಕುವುದಕ್ಕೆ ಆಗುತ್ತದೆ? ಈಗ ಕೊಟ್ಟಿರುವ ಹಣದಲ್ಲಿ ಒಬ್ಬ ಎಂ.ಎಲ್.ಎ.ಗೆ 18 ಲಕ್ಷ ರೂ.ಗಳಂತೆ ಆದರೆ, ನಾವು ಬೋರ್‌ವೆಲ್‌ಗಳನ್ನು 1,300 ಅಡಿಯವರೆಗೆ ಕೊರೆಯುತ್ತಿದ್ದೇವೆ. ಒಂದು ಬೋರ್‌ವೆಲ್‌ಗೆ ಒಂದು ಲಕ್ಷ ಎಂಭತ್ತು ಸಾವಿರ ರೂ.ಗಳಾಗುತ್ತದೆ.

ಅಧ್ಯಕ್ಷರು : ಆ ವಿಷಯ ಇಲ್ಲಿ ಇಲ್ಲ, ಅದನ್ನು ಬಿಡಿ. ದಯವಿಟ್ಟು ವಿಷಯಾಂತರ ಮಾಡಬೇಡಿ. ಈ ವಿಷಯ ಬರಗಾಲ ವಿಷಯದಲ್ಲಿ ಚರ್ಚೆಯಾಗಿದೆಯಲ್ಲಾ?

ಶ್ರೀ ವರ್ತೂರು ಆರ್. ಪ್ರಕಾಶ್ : ಒಂದು ವಿಧಾನಸಭಾ ಕ್ಷೇತ್ರಕ್ಕೆ 18 ಲಕ್ಷ ರೂ.ಗಳನ್ನು ಕೊಟ್ಟಿರುವುದು, ಇಷ್ಟು ಹಣ ಸಾಕಾಗುವುದಿಲ್ಲ. ಇದಕ್ಕೆ 50 ಲಕ್ಷ ರೂ.ಗಳನ್ನು ಕೊಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ನೀರಾವರಿ ಯೋಜನೆಗಳು ಇರುವಂಥ ಜಾಗಕ್ಕೂ ಅದೇ ಮಾನದಂಡ, ಬರಗಾಲ ಇರುವಂಥ ಜಾಗಕ್ಕೂ ಅದೇ ಮಾನದಂಡವಿದೆ. ಹಾಗಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ 50 ಲಕ್ಷ ರೂ.ಗಳನ್ನು

ಬೋರ್‌ವೆಲ್‌ಗಳನ್ನು ಕೊರೆಸುವುದಕ್ಕೆ ಬಿಡುಗಡೆ ಮಾಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರೆ ಮುಖೇನ ಸರ್ಕಾರಕ್ಕೆ ವಿನಂತಿ ಮಾಡುತ್ತಾ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್‌ಶೆಟ್ಟರ್ (ಹುಬ್ಬಳ್ಳಿ ಧಾರವಾಡ ಸೆಂಟ್ರಲ್) : ಮಾನ್ಯ ರಮೇಶ್‌ಕುಮಾರ್ ಮತ್ತು ಮಾನ್ಯ ಶಿವಶಂಕರರೆಡ್ಡಿಯವರು ಎಲ್ಲರೂ ಏನು ವಿಷಯವನ್ನು ಪ್ರಸ್ತಾಪ ಮಾಡಿದರು. ನಾನು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನನ್ನ ಮೇಲೂ ಸಾಕಷ್ಟು ಒತ್ತಡ ಬಂದಿತ್ತು. ಇದರ ಬಗ್ಗೆ ನಾನು ಮತ್ತು ಹಿಂದನ ಮಾನ್ಯ ನೀರಾವರಿ ಮಂತ್ರಿಯವರು ಆಸಕ್ತಿಯನ್ನು ತೆಗೆದುಕೊಂಡು ಎತ್ತಿನಹೊಳೆ ಮತ್ತು ಪಶ್ಚಿಮ grid canal ಬಗ್ಗೆಯೂ ಸಹಿತ ನಾವು cabinet ನಲ್ಲೂ ಪಾಸ್ ಮಾಡಿದ್ದೇವೆ. ಮಾನ್ಯ ರಮೇಶ್‌ಕುಮಾರ್‌ರವರು refer ಮಾಡಿದರು. ಬಜೆಟ್‌ನಲ್ಲೂ ಕೂಡ ಅನುದಾನವನ್ನು ಕೊಡುವ ಪ್ರಯತ್ನವನ್ನು ಮಾಡಿದ್ದೇವೆ. ನಮ್ಮ ಕಡೆಯಿಂದ ಅಲ್ಪ ಕಾಲಾವಧಿಯಲ್ಲಿ ಪ್ರಯತ್ನ ಮಾಡಿದ್ದೇವೆ ಅದನ್ನು ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಬಂದಿರುವಂಥ ಸರ್ಕಾರ ಮುಂದುವರೆಸಬೇಕು. ಈ 3–4 ಜಿಲ್ಲೆಗಳ ಕುಡಿಯುವ ನೀರಿನ ಸಮಸ್ಯೆ ಇದೆ. ಈ ಸಮಸ್ಯೆಗೆ ಬಹಳ ವರ್ಷಗಳಿಂದ ಬೇಡಿಕೆ ಇದೆ. ಆದಷ್ಟು ಬೇಗನೆ ಇದಕ್ಕೆ ಹೆಚ್ಚಿನ ರೀತಿಯಲ್ಲಿ ಈಗ ಹೊಸದಾಗಿ ಮಾಡುವ ಬಜೆಟ್‌ನಲ್ಲಿ provision ಮಾಡಿ, ಆದಷ್ಟು ಬೇಗನೆ ನಮ್ಮ timeನಲ್ಲೇ ಅದಕ್ಕೆ ಭೂಮಿ ಪೂಜೆ ಮಾಡಬೇಕೆಂಬ ಪ್ರಯತ್ನ ನಡೆಯಿತು ಆಗಲಿಲ್ಲ, ಈಗ ಹೊಸದಾಗಿ ಮಾನ್ಯ ಮುಖ್ಯಮಂತ್ರಿಯವರು ಮಾಡಲಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಅದಕ್ಕೆ ಅವರು ಹೇಳಿದರು. Pipe ಬೇಡ canal ಹಾಕಿ ಎಂದು ಹೇಳಿದರು.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಏನು ಚರ್ಚೆ ನಡೆಯುತ್ತಿದೆ. ಈ ವಿಚಾರದಲ್ಲಿ ಮಾನ್ಯ ರಮೇಶ್‌ಕುಮಾರ್‌ರವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುವುದಕ್ಕೆ ಇಷ್ಟಪಡುತ್ತೇನೆ. ಬಹಳ ಚೆನ್ನಾಗಿ ಸೂಕ್ಷ್ಮವಾದ ವಿಚಾರಗಳನ್ನು ಹೇಳಿದ್ದಾರೆ. ತಾವು ದಯಮಾಡಿ ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. 5 ಜಿಲ್ಲೆಗಳ ಜನಗಳ ಅಳಿವು ಉಳಿವಿನ ಪ್ರಶ್ನೆ ಇದು. ಈಗ ಕೋಲಾರ ಜಿಲ್ಲೆಗೆ ಯಾವ ಸ್ಥಿತಿ ಬಂದಿದೆ, ಆ ಸ್ಥಿತಿಯನ್ನು ಇವತ್ತು

ನಮ್ಮ ರಾಮನಗರ ಜಿಲ್ಲೆಯಲ್ಲಿಯೂ ನೋಡುತ್ತಿದ್ದೇವೆ. ಅದರ ಜೊತೆಯಲ್ಲಿ ನೀರನ್ನು ಕೊಟ್ಟರೆ ನೀವು ಬೆಂಗಳೂರಿಗೂ ಕುಡಿಯುವ ನೀರನ್ನು ಕೊಡಬಹುದು. ತಿಪ್ಪಗೊಂಡನ ಹಳ್ಳಿ ಜಲಾಶಯದಿಂದ ನೀವು ಬೆಂಗಳೂರಿಗೂ ನೀರನ್ನು ಕೊಡಬಹುದು. ಆದ್ದರಿಂದ ದಯಮಾಡಿ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕು. ಇದು ವಿಶೇಷ ಪ್ರಕರಣವೆಂದು ಪರಿಗಣಿಸಿ ಈ ಬಜೆಟ್‌ನಲ್ಲಿ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಜನತೆಗೂ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಡಾ:ಪರಮಶಿವಯ್ಯನವರು ವರದಿಯನ್ನು ಕೊಟ್ಟು ಬಿಟ್ಟಿದ್ದಾರೆ.

ಅಧ್ಯಕ್ಷರು : ಸ್ವಲ್ಪ ತಾಳಿ. ಈಗ ಚರ್ಚೆ ಮುಕ್ತಾಯವಾಗಿದೆ. ಮಾನ್ಯ ನೀರಾವರಿ ಸಚಿವರು ನಾಳೆ ಉತ್ತರ ಕೊಡುತ್ತಾರೆ. ಈಗ ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಭಾಷಣ ಇದೆ. ಈಗ ಹೇಳಿ ಬಿಡುತ್ತೇನೆ ಕೇಳಿ. ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆ ಇವತ್ತು ಮುಕ್ತಾಯವಾಗಲೇಬೇಕು. ಈಗ ಯಾರಾದರೂ ಒಬ್ಬರಿಬ್ಬರು ಇದ್ದರೆ ಮಾತನಾಡಬಹುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವತ್ತು 9–10 ಗಂಟೆಯಾದರೂ ಕುಳಿತುಕೊಳ್ಳಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೀರೆಂದು ಕಾಣುತ್ತದೆ.

ಅಧ್ಯಕ್ಷರು : ಇವತ್ತು ಚರ್ಚೆ ಮುಕ್ತಾಯವಾಗಲೇಬೇಕು. ಆಯಿತು, ಗ್ರಾಮೀಣಾಭಿವೃದ್ಧಿ ಸಚಿವರು.

ಶ್ರೀ ಜಗದೀಶ್ ಶೆಟ್ಟರ್ : ಆ ಬಿಲ್ ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು : ಆಯಿತು, ನಾಳೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಸಿ.ಬಾಲಕೃಷ್ಣ : ತಾವು ನನಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ

ಮಾಡುವುದಕ್ಕಿಂತ ಮೊದಲು ಈಗಾಗಲೇ ರಾಜ್ಯಪಾಲರ ಭಾಷಣದ ಮೇಲೆ ಪ್ರಸ್ತಾಪವಾದಂತೆ ಹಾಗೂ ಮೊನ್ನೆ ನಡೆದಂಥ ಚರ್ಚೆಯೊಳಗೆ ಎಲ್ಲಾ ಗೌರವಾನ್ವಿತ ಸದಸ್ಯರು ಈ ಗ್ರಾಮಸಭೆಯ ವಿಚಾರವಾಗಿ ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ಗ್ರಾಮ ಸಭೆಗಳನ್ನು ಮಾಡುವುದಕ್ಕೆ ಬಹಳಷ್ಟು ಮಹತ್ವ ಕೊಡಬೇಕು ಹಾಗೂ ಒಂದು ವೇಳೆ ಗ್ರಾಮಸಭೆ ಮಾಡುವುದನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮುತುವರ್ಜಿ ವಹಿಸದೆ ಹೋದರೆ ನಿರ್ಲಕ್ಷ್ಯ ಮಾಡಿದರೆ ಉದ್ದೇಶಪೂರ್ವಕವಾಗಿ ಗ್ರಾಮಸಭೆಯನ್ನು ಮತ್ತು ವಾರ್ಡ್ ಸಭೆಗಳನ್ನು ಮಾಡದೆ ಹೋದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಬಿಲ್ ಅನ್ನು ತಂದಿರುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನನ್ನದೊಂದು request. ಈಗ ಸಂಜೆ 7 ಗಂಟೆ ಆಗಿದೆ. ಇನ್ನು Governor address ಮೇಲೆ ಮಾತನಾಡುವವರು ಇದ್ದಾರೆ. ಮಂಡನೆ ಮಾಡುವುದಕ್ಕೆ ಏನೂ ತಕರಾರು ಇಲ್ಲ. ಚರ್ಚೆ ಮಾಡುವುದಾದರೆ...

ಅಧ್ಯಕ್ಷರು : ಮಂಡನೆ ಮಾತ್ರ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಂಡನೆ ಬೇಕಾದರೆ ಮಾಡಲಿ, ಚರ್ಚೆಗೆ ಬೇಕಾದರೆ ನಾಳೆ ತೆಗೆದುಕೊಳ್ಳಲಿ.

(ಗೊಂದಲ)

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಕೆ..ಪಾಟೀಲ್ : ಅದರಲ್ಲಿ ಬೇರೆ ಏನೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಬಿಲ್ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಆದರೆ, ಅದರ ಬಗ್ಗೆ ಚರ್ಚೆ ಆಗಬೇಕು. ಇವತ್ತು ಮಂಡನೆ ಮಾಡಿ ಬೇಕಾದರೆ ನಾಳೆ ಚರ್ಚೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು : Introduce ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : Introduce ಇವತ್ತು ಮಾಡಲಿ, ಇವತ್ತೇ ಚರ್ಚೆಗೆ ತೆಗೆದುಕೊಳ್ಳುವುದು ಬೇಡವೆಂದು ನಾನು ಹೇಳಿದೆ.